ಸೂಚಕರಾದ ಮಾನ್ಯ ಡಿ.ಆರ್. ಪಾಟೀಲ್‌ರವರ ಅನ್ಯ ನಿಮಿತ್ತ ಕಾರ್ಯಕ್ಕಾಗಿ ಹೊರಗಿರುತ್ತಾರೆ. ಆದ್ದರಿಂದ ಮಾನ್ಯ ಬಸವರಾಜ ರಾಯರೆಡ್ಡಿಯವರು ಅನುಮೋದಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಡಿ.ಆರ್. ಪಾಟೀಲ್‌ರವರಿಗೆ ಮೂವ್ ಮಾಡುವುದಕ್ಕೆ ಅವರಿಗೆ ಇಷ್ಟವಿಲ್ಲ. ಈ ಭಾಷಣ ಮಾಡಿಸಿರುವುದು ಒಬ್ಬರಿಗೆ ಇಷ್ಟವಿದ್ದರೆ, ಒಬ್ಬರಿಗೆ ಇಷ್ಟವಿಲ್ಲ. ಈಗ ನೋಡಿದರೆ ಗೊತ್ತಾಗುತ್ತದಲ್ಲಾ. ಸಮ್ಮಿಶ್ರ ಸರ್ಕಾರ ಆದರೆ ಹೀಗೆಯೇ. ಕಾಂಗ್ರೆಸ್‌ನವರು ಪ್ರೊಪೋಸ್ ಮಾಡುತ್ತಾರೆ. ಆದರೆ ನೀವು ಸೆಕೆಂಡ್ ಮಾಡುವುದಿಲ್ಲ ಎಂದರೆ ನಿಮ್ಮಲ್ಲಿಯೇ ವ್ಯತ್ಯಾಸವಿದೆ. ನಿಮಗೆ ಜೀರ್ಣವಾಗಿಲ್ಲ. ಅವರೇನೋ ಅನುಮೋದಿಸಿಕೊಂಡು ಬಿಟ್ಟರು, ಅವರ ಪಾರ್ಟಿ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಅದು ರೂಲಿಂಗ್ ಪಾರ್ಟಿಗೆ ಬಿಟ್ಟ ವಿಷಯ. ಯಾರೂ ಬೇಕಾದರೂ ಮಾತನಾಡಲಿ. ಆದರೆ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸಂಸದೀಯ ಸಚಿವರಾಗಿ ಇಂಥ ಪ್ರಮುಖವಾದ ವಿಷಯದ ಬಗ್ಗೆ ಮಾನ್ಯ ಡಿ.ಆರ್. ಪಾಟೀಲರು ಮಾತನಾಡುತ್ತಾರೆ ಎಂದು ಹೇಳಿ, ಇದಕ್ಕೆ ಯಾರೂ ಸಿದ್ಧತೆಯನ್ನೇ ಮಾಡಿಕೊಳ್ಳದೆಯೇ ಇದ್ದರೆ ಹೇಗೆ? ಅಂದರೆ ರಾಜ್ಯಪಾಲರ ಭಾಷಣದಲ್ಲಿ ಚರ್ಚೆ ಮಾಡುವಂಥದ್ದು ಏನೂ ಇಲ್ಲ. ಈಗಾಗಲೇ ಆ ರೀತಿ ಅನೇಕ ಸಚಿವರುಗಳು ಹೇಳಿಕೆಗಳನ್ನು ಕೊಟ್ಟಾಗಿದೆ. ನಿಮ್ಮ ಕಾಮನ್ ಮಿನಿಮಮ್ ಪ್ರೋಗ್ರಾಂ ಪ್ರಾರಂಭವಾಗಿಲ್ಲ. ಮತ್ತೆ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನಿದೆಯೋ ಅದನ್ನು ಒಟ್ಟಾಗಿ ಸೇರಿಸಬೇಕು ಎಂದು ಇಲ್ಲ. ಆದ್ದರಿಂದ ಮುಂದೆ ಬಜೆಟ್ ವಿಷಯದಲ್ಲಿ ನಾವು ಮಾತನಾಡುತ್ತೇವೆಂದು ಹೇಳಿ ಕೇವಲ ತಾತ್ಕಾಲಿಕವಾಗಿ ಏನೋ ಒಂದು ಕುಂಟು ನೆಪ, ಒಂದು ಪದ್ಧತಿಯಂತೆ ಆಗಿ ಬಿಡಬೇಕು ಎಂದು ಹೇಳಿ ರಾಜ್ಯಪಾಲರ ಭಾಷಣ ಮಾಡಿಸಿರುವಂಥದ್ದೂ ಸಹ ಭಾಷಣದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಅಂದರೆ ಇದು ಯಾರಿಗೂ ಗೌರವ ತರುವಂಥದ್ದಲ್ಲ. ಈಗಾಗಲೇ ಸರ್ಕಾರ ರಚನೆಯಾಗಿ ಒಂದು ತಿಂಗಳಾಯಿತು. ಇನ್ನೂ ಪೂರ್ತಿ ಮಂತ್ರಿ ಮಂಡಲ ಆಗಿಲ್ಲ. ಈ ರೀತಿಯಾದರೆ ರಾಜ್ಯದ ಜನರ ಗತಿ ಏನಾಗಬೇಕು?

ಅಧ್ಯಕ್ಷರು:– ಇಂಥ ವಿಚಾರಗಳಲ್ಲಿ ಸರ್ಕಾರ ಎಚ್ಚರವಾಗಿ ಇರಬೇಕು ಎನ್ನತಕ್ಕಂಥ ಮನವಿಯನ್ನು ಮಾಡುತ್ತಾ ಈಗ ಮಾನ್ಯ ಬಸವರಾಜ ರಾಯರೆಡ್ಡಿಯನ್ನು ಸದರಿ ಸೂಚನೆಗೆ ಅನುಮೋದನೆ ಕೊಡಬೇಕು.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ): ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

12. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಮಾಣದ ಮೇಲಿನ ಚರ್ಚೆ

+ಡಾ: ಜಿ. ಪರಮೇಶ್ವರ್ (ಮಧುಗಿರಿ): ಮಾನ್ಯ ಅಧ್ಯಕ್ಷರೇ, ಭಾರತದ ಸಂವಿಧಾನದ 176ನೇ ಅನುಚ್ಛೇದದಡಿ ಏನು ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಹೊಸ ಸರ್ಕಾರದ ರೂಪುರೇಷೆಗಳನ್ನು ಸದನಕ್ಕೆ ತಿಳಿಸಿದ್ದಾರೆ. ಸದನದ ನಿಯಮಾವಳಿ 20ರ ಪ್ರಕಾರ ನಾನು ಸನ್ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ನನ್ನ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ಹೊಸದಾಗಿ ಆರಿಸಿ ಬಂದಿರುವ ಸುಮಾರು

103 ಸದಸ್ಯರಿಗೆ ವಿಶೇಷವಾಗಿ ಮತ್ತು 121 ಸದಸ್ಯರುಗಳು ಮರು ಆಯ್ಕೆಯಾಗಿ ಈ ಸದನಕ್ಕೆ ಏನು ಬಂದಿದ್ದಾರೆ ಅವರೆಲ್ಲರಿಗೂ ಕೂಡ ನನ್ನ ಶುಭ ಕಾಮನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಏಪ್ರಿಲ್ 20 ಮತ್ತು 26ನೇ ತಾರೀಖುಗಳಂದು ರಾಜ್ಯದಲ್ಲಿ ಚುನಾವಣೆ ನಡೆಯಿತು. ನಮ್ಮ ರಾಜ್ಯದಲ್ಲಿ ಈ ಚುನಾವಣೆ ಬಹಳ ಶಾಂತಿಯಿಂದ ನಡೆಯಿತು. ಈ ಚುನಾವಣೆಯನ್ನು ಬಹಳ ಶಾಂತಿಯಿಂದ ನಡೆಸುವುದಕ್ಕೆ ಸರ್ಕಾರ ಅಗತ್ಯವಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಲು ಕ್ರಮ ತೆಗೆದುಕೊಂಡಿತ್ತು. ಈ ಚುನಾವಣೆಯಲ್ಲಿ ಪ್ರತಿಯೊಂದು ಪಕ್ಷದವರೂ ಕೂಡ ತಮ್ಮದೇ ಆದ ನಿರೀಕ್ಷೆಯನ್ನು ಮತದಾರರಿಂದ ನಿರೀಕ್ಷಿಸುತ್ತಿತ್ತು. ಕಾಂಗ್ರೆಸ್ ಪಕ್ಷದವರು ನಾವೇ ಹೆಚ್ಚು ಬಹುಮತವನ್ನು ಪಡೆಯುತ್ತೇವೆಂದೂ, ಜನತಾ ದಳ (ಎಸ್) ರವರು ಕೂಡ ತಾವೇ ಬಹುಮತ ಪಡೆದು ಬರುತ್ತೇವೆಂದು ಬಿಜೆಪಿಯವರೂ ಕೂಡ ತಾವೇ ಅಧಿಕಾರಕ್ಕೆ ಬರುತ್ತೇವೆಂದೂ, ಹೀಗೆ ನಮ್ಮ ನಮ್ಮ ಆಸೆಗಳು ಇದ್ದವು. ಹೆಬ್ಬಾಗಿಲಿನ ಮೂಲಕ ದಕ್ಷಿಣ ಭಾರತವನ್ನೇ ಪ್ರವೇಶ ಮಾಡುತ್ತೇವೆಂದು ಅವರೂ ಸಹ ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ಮತದಾರರು ಆ ನಿರೀಕ್ಷೆಯನ್ನೆಲ್ಲಾ ಮೀರಿ ಇವ್ಹೊತ್ತು ಸದನಕ್ಕೆ ನಮ್ಮನ್ನು ಬೇರೆ ಬೇರೆ ರೀತಿ, ಅಂದರೆ ಯಾವ ಯಾವ ರೀತಿಯಲ್ಲಿ ಕಳುಹಿಸಬೇಕೋ ಆ ರೀತಿಯಲ್ಲಿ ಕಳುಹಿಸಿದ್ದಾರೆ. ಮತದಾರರು ತೀರ್ಪನ್ನು ಯಾವ ರೀತಿಯಲ್ಲಿ ಕೊಟ್ಟರೆಂದರೆ ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಹಂಗ್ ಆಸೆಂಬ್ಲಿ ಆಗುವ ರೀತಿಯಲ್ಲಿ ಮತದಾರರು ತೀರ್ಪನ್ನು ಕೊಟ್ಟರು. ಇತಿಹಾಸದಲ್ಲಿಯೇ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಹಂಗ್ ಆಸೆಂಬ್ಲಿ ರಚನೆಯಾಗುತ್ತಿರುವುದು. ಇದು ಒಂದು ರೀತಿಯ ಎಕ್ಸ್‌ಪರಿಮೆಂಟ್. ಕರ್ನಾಟಕ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ರಚನೆಯ ಪ್ರಯೋಗ ಪ್ರಥಮ ಬಾರಿಯಾಗಿದೆ. ಬಹಳ ಜನರಿಗೆ ಆಶ್ಚರ್ಯವಾಗುತ್ತದೆ. ಏನಪ್ಪಾ, ಜನತಾ ದಳ (ಎಸ್) ಒಂದು ರೀತಿಯ ಮ್ಯಾನಿಫೆಸ್ಟೋ ಇಟ್ಟುಕೊಂಡು ಚುನಾವಣೆಗೆ ಹೊರಟಿತ್ತು. ಕಾಂಗ್ರೆಸ್‌ನವರು ಒಂದು ಮ್ಯಾನಿಫೆಸ್ಟೋ ಇಟ್ಟುಕೊಂಡು ಚುನಾವಣೆಗೆ ಹೊರಟಿದ್ದರು. ಆದರೆ ಇವ್ಹೊತ್ತು ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡಬೇಕಾದರೆ ಇವರಿಬ್ಬರೂ ಒಂದಾಗಿ ಬಿಟ್ಟರಲ್ಲಾ ಎಂದು ಆಶ್ಚರ್ಯ ಪಡುತ್ತಾರೆ. ಏಕೆ ಒಂದಾದರು ಎಂಬುದೇ ಬಹಳ ಜನರಿಗೆ ಇವ್ಹೊತ್ತು ಆಶ್ಚರ್ಯವಾಗುತ್ತಿದೆ. ಆದರೆ ಒಂದು ವಿಷಯವನ್ನು ನಾವು ಮರೆಯಬಾರದು. ಇದು ಇವ್ಹೋತ್ತು ಅನಿವಾರ್ಯ. ಸರ್ಕಾರವನ್ನು ರಚನೆ ಮಾಡತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ ಹಾಗೂ ಅನಿವಾರ್ಯ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಜ್ಞಾಪಕ ಮಾಡುತ್ತೇನೆ. ಚುನಾವಣೆಯಾದ ನಂತರ ಚುನಾವಣೆಯ ಫಲಿತಾಂಶ ಬಂದ ಮೇಲೆ ಈ ರೀತಿಯಲ್ಲಿ ಆಯ ಮೇಲೆಯೇ ನಾವೆಲ್ಲರೂ ವಿಶ್ಲೇಷಣೆಯನ್ನು ಮಾಡಿದೆವು. ಯಾವ ಯಾವ ಪಕ್ಷಕ್ಕೆ ಎಷ್ಟೆಷ್ಟು ಮತಗಳು ಬಿದ್ದಿವೆ ಎಂಬುದನ್ನು ನೋಡಿದೆವು. ಇದರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇಡೀ ರಾಜ್ಯದಲ್ಲಿ 35 ಪರ್ಸೆಂಟ್ ಮತದಾರರು ತಮ್ಮ ಮತವನ್ನು ಹಾಕಿದ್ದಾರೆ, ಬಿಜೆಪಿಗೆ 28.5 ಪರ್ಸೆಂಟ್ ಮತದಾರರು ತಮ್ಮ ಮತವನ್ನು ಹಾಕಿದ್ದಾರೆ ಎನ್ನತಕ್ಕಂಥ ಅಂಕಿ ಅಂಶವು ನಾವು ವಿಶ್ಲೇಷಣೆ ಮಾಡಿದಾಗ ಹೊರಬಂತು. ಆದರೆ ಇವ್ಹೊತ್ತು ಸಮ್ಮಿಶ್ರ ಸರ್ಕಾರ ರಚನೆ ಮಾಡಿರುವ ಕಾಂಗ್ರೆಸ್ ಹಾಗೂ ಜನತಾ ದಳ (ಎಸ್) ಪಕ್ಷಗಳು ಏನಿವೆ ಇವೆರಡೂ ಪಕ್ಷ ಪಡೆದಿರತಕ್ಕ ಮತಗಳನ್ನು ಗಣನೆಗೆ ತೆಗೆದುಕೊಂಡರೆ 55 ಪರ್ಸೆಂಟ್ ಮೇಲಿಯೇ ಇದೆ. ಅಂದರೆ ಈ ಎರಡೂ ಪಕ್ಷಗಳನ್ನು ಜನರು ಒಪ್ಪಿದ್ದಾರೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಇಷ್ಟಪಡುತ್ತೇನೆ. ಏಕೆಂದರೆ ನಮ್ಮ ಚುನಾಯವಣೆಯ ಪ್ರಣಾಳಿಕೆಯನ್ನು ತಾವು ನೋಡಬೇಕು. ಪಕ್ಷ ಬೇರೆ ಇರಬಹುದು, ನಮ್ಮ ಬಾವುಟ ಬೇರೆ ಇರಬಹುದು, ಬ್ಯಾನರ್ ಬೇರೆ ಇರಬಹುದು, ಆದರೆ ಚುನಾವಣಾ ಪ್ರಣಾಳಿಕೆಯಲ್ಲಿ ಅನೇಕ ವಿಷಯಗಳು ಒಂದು ರೀತಿಯಲ್ಲಿ ಕಾಮನ್ ಮಿನಿಮಮ್ ಪ್ರೋಗ್ರಾಂ ರೀತಿಯಲ್ಲಿಯೇ ಇದ್ದವು. ಅಂದರೆ ರಾಜ್ಯದ ಅನೇಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ದೃಷ್ಟಿಯಲ್ಲಿ ಅಥವಾ ಅನೇಕ ನೀತಿಗಳ ಪ್ರಶ್ನೆ ಬಂದಾಗ ನಮ್ಮಲ್ಲಿ ಹೊಂದಾಣಿಕೆ ಇರತಕ್ಕಂಥದ್ದು ಆ ಪ್ರಣಾಳಿಕೆಯಲ್ಲಿ ಕಾಣಿಸತಕ್ಕಂಥದ್ದು ಇತ್ತು. ಆದ್ದರಿಂದ ನಾವು ಏನು ಇವೊತ್ತು ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡಿದ್ದೇವೆ ಅದನ್ನು ನಾನು ಸಮರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ನಮಗೆ ಒಂದು ಕಾನ್ಸ್‌ಟ್ಯುಟ್ಯೂಶನ್ ಅಬ್ಲಿಗೇಶನ್ ಕೂಡ ಇರತಕ್ಕಂಥದ್ದು ಇದೆ. ಈ ಸರ್ಕಾರವನ್ನು ರಚನೆ ಮಾಡಬೇಕಾದರೆ ಮಾಡಬೇಕಾಗಿರತಕ್ಕಂಥದ್ದು ಅನಿವಾರ್ಯ ಮತ್ತು ಕಾನ್ಸ್‌ಟ್ಯುಟ್ಯೂಶನ್ ಅಬ್ಲಿಗೇಶನ್ ಎನ್ನತಕ್ಕಂಥ ಮಾತನ್ನೂ ಕೂಡ ಇವೊತ್ತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ನನಗನ್ನಿಸುತ್ತದೆ ಯಾರೂ ಕೂಡ ಶಾಸಕರುಗಳು ತಕ್ಷಣ ಚುನಾವಣೆಗೆ ಹೋಗುವುದಕ್ಕೆ ರೆಡಿ ಇರಲಿಲ್ಲ. ಶಿವಣ್ಣನವರೇ, ತಾವು ಸೇರಿದಂತೆ ಯಾವ ಶಾಸಕರೂ ಕೂಡ ಚುನಾವಣೆಗೆ ಹೋಗುವುದಕ್ಕೆ ರೆಡಿ ಇರಲಿಲ್ಲ.

4.40 ಪಿಎಂ

ಶ್ರೀ ಎಸ್. ಶಿವಣ್ಣ (ತುಮಕೂರು): ನಾನು ಒಂದು ಹಳ್ಳಿಗೆ ಹೋಗಿದ್ದೆ, ಅಲ್ಲಿ ಅತ್ತೆ ಹಾಗೂ ಮಗಳು ಇಬ್ಬರು ಒಂದೇ ತರಹ ಸೀರೆ ಉಟ್ಟುಕೊಂಡಿದ್ದರು. ಆಗ ಅದರಲ್ಲಿ ತಾಯಿ, ಮಗಳು ಯಾರು ಎಂಬುದು ಗೊತ್ತಾಗಲಿಲ್ಲ. ಇವರು ಎರಡು ಪಕ್ಷ ಹೊಂದಾಣಿಕೆಯೊಳಗೆ ಎಷ್ಟು ಸುಂದರವಾಗಿ, ಎಷ್ಟು ತಂಪಾಗಿ ಹೇಳಿದರು ಎಂದರೆ ನನಗೇ ಭಾವೋದ್ವೇಗ ಆಗಿ ಹೋಗಿ ಬಿಡುತ್ತದೆ. ಆತ್ತೆ ಯಾರು ಇದರಲ್ಲಿ ಮಗಳು ಯಾರು ಎಂಬುದು ಗೊತ್ತಾಗಬೇಕು, ಅಷ್ಟೇ ನನಗೆ ಬೇಕಾಗಿರುವುದು.

ಡಾ: ಜಿ. ಪರಮೇಶ್ವರ್: ನಿಮಗೆ ಚೆನ್ನಾಗಿ ಅರ್ಥವಾಗುತ್ತದೆ ಎಂದು ತಿಳಿದುಕೊಂಡಿದ್ದೆ. ಏಕೆಂದರೆ ಕೇಂದ್ರ ಸರ್ಕಾರದವರು ಎನ್‌ಡಿಎ ಸರ್ಕಾರ ಮಾಡಿದ್ದರಲ್ಲಾ, ಆಗ 26 ಪಕ್ಷಗಳು ಸೇರಿಕೊಂಡು ಮಾಡಿದ್ದರು. ಒಂದೆರಡು ಪಕ್ಷಗಳಾಗಿದ್ದರೆ ಜ್ಞಾಪಕ ಇರುತ್ತಿತ್ತು ನಿಮಗೆ. ಇಷ್ಟೊಂದು ಮಾಡಿದಾಗ ನಿಮಗೆ ಅರ್ಥವಾಗಲಿಲ್ಲ. ಇರಲಿ, ಪರವಾಗಿಲ್ಲ ಮುಂದೆ ಅರ್ಥ ಮಾಡಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಪರಮೇಶ್ವರ್‌ರವರು ಹೆಬ್ಬಾಗಿಲು ಎಂದು ನಾವು ಹೇಳಿದೆವು ಎಂದು ಹೇಳಿದಿರಿ, ಆದರೆ ನೀವು ಏನೂ ಮಾಡಿದಿರಿ? ಅಧಿಕಾರಕ್ಕೆ ಹಿಂದಿನ ಬಾಗಿಲಿನಿಂದ ಬಂದಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಜಗದೀಶ್ ಶೆಟ್ಟರ್‌ರವರ ಪರಿಸ್ಥಿತಿ ಏನಾಗಿದೆ ಎಂದರೆ ನರಿ ದ್ರಾಕ್ಷಿ ಹುಳಿ ಎಂದು ಹೇಳಿತ್ತಂತಲ್ಲಾ ಹಾಗೆ ಆಗಿದೆ. ಇಲ್ಲಿ ಒಳಗೆ ಬರುವುದಕ್ಕೆ ಪ್ರಯತ್ನ ಪಟ್ಟರು ನಮ್ಮ ಮಿತ್ರ ಪಕ್ಷಗಳು ಎಂದು ಹೆಸರು ಕೂಡಿಸಿಕೊಂಡು, ಆದರೆ ಅದು ಸಾಧ್ಯವಾಗಲಿಲ್ಲ ಎಂದು ಇಲ್ಲಿ ಬಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಪಾಟೀಲ್‌ರವರು ಮೊನ್ನೆ ಇಲ್ಲಿ ಕುಳಿತುಕೊಂಡು ಕಾಂಗ್ರೆಸ್ಸಿಗೆ ಏನೇನು ಬಯ್ದಿದ್ದೀರಿ, ಏನೇನು ಉಗಿದಿದ್ದಿರಿ, ಆದರೆ ಅಲ್ಲಿ ಹೋಗಿ ಹೊಕ್ಕಿದ್ದೀರಲ್ಲಾ, ಬಹಳ ಕೆಟ್ಟದು ಅನಿಸುತ್ತದೆ. ಇಲ್ಲಿ ಕುಳಿತು ಏನೇನು ಮಾತನಾಡಿದ್ದಿರಿ, ಮರುದಿವಸ ಕಾಂಗ್ರೆಸ್ಸಿಗೆ ಹೋಗಿದ್ದಿರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರಿಗಾದರೂ ಆಗಲಿ, ಆದರೆ ಮಾನ್ಯ ಎಸ್.ಎಸ್. ಪಾಟೀಲ್ ರವರಿಗೆ ಈ ಮಾತು ಬರಬಾರದು.

ಶ್ರೀ ಎಸ್.ಎಸ್. ಪಾಟೀಲ್: ನಾನು ಮಾತನಾಡುವಾಗ ಮುಂದೆ ಎಲ್ಲಾ ಹೇಳುತ್ತೇನೆ. ನಿಮ್ಮ ಪಕ್ಕದಲ್ಲಿ ದಳ, ಕಮಲ ಎರಡು ಕುಳಿತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ನೀವು ಏನೇನು ಕಾಂಗ್ರೆಸ್ ಬಗ್ಗೆ ಮಾತನಾಡಿದ್ದೀರಿ ಹಾಗೂ ಬರಗಾಲ ಕಾಮಗಾರಿ ಬಗ್ಗೆ, ನಿಮಗೆ ಅಲ್ಲಿ ಕುಳಿತು ಮಾತನಾಡುವುದಕ್ಕೆ ಒಂದಿಷ್ಟು ನೈತಿಕ ಹಕ್ಕು ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನಾನು ಮಾತನಾಡುವಾಗ ಮುಂದೆ ಹೇಳುತ್ತೇನೆ. ಆಗ ಕೇಳುವಂತಿರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಒಂದಂತೂ ನಿಜ, ಅಲ್ಲಿ ಡಿಪೆಂಡ್ ಮಾಡಿಕೊಳ್ಳುವುದಕ್ಕೆ ನಾವೇ ಕಳುಹಿಸಿದ್ದೇವೆ. ಇಲ್ಲಿ ಸೇರಿಕೊಳ್ಳುವುದಕ್ಕೆ ಸುಮಾರು ಜನರನ್ನು ಕಳುಹಿಸಿದ್ದೇವೆ. ನಾವು ಮಧ್ಯದಲ್ಲಿ ಕುಳಿತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಅಲ್ಲಿ ಬರೀ ದಳ ಕಮಲ ಇದೆ.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರನ್ನು ಯಾರೂ ಸಮರ್ಥನೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅನುಕೂಲ ಯಾವ ರೀತಿಯಾಗುತ್ತದೆ ಆ ರೀತಿಯಾಗುತ್ತದೆ. ಒಂದನ್ನು ಜ್ಞಾಪಕ ಇಟ್ಟುಕೊಳ್ಳಬೇಕು, ರಾಜ್ಯದ ಹಿತದೃಷ್ಟಿಯಿಂದ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾವೇನು ಇವತ್ತು ಸಮ್ಮಿಶ್ರ ಸರ್ಕಾರವನ್ನು ಮಾಡಿದ್ದೇವೆ ಎನ್ನುವುದನ್ನು ದಯಮಾಡಿ ತಾವು ಮರೆಯಾಬಾರದು. ನಾವು ಪ್ರಶ್ನೆ ಮಾಡಬೇಕಾಗುತ್ತದೆ. ತಾವು ಎನ್‌ಡಿಎ ಸರ್ಕಾರವನ್ನು ಕೇಂದ್ರದಲ್ಲಿ ಮಾಡುವಾಗ ನಾವು ಭಾವಿಸಿಕೊಂಡಿದ್ದ ಅದೇ ಉದ್ದೇಶ ತಮಗೆ ಇತ್ತು ಎಂದು ಈ ದೇಶದ ಭವಿಷ್ಯಕ್ಕೋಸ್ಕರ, ಈ ದೇಶವನ್ನು ಬಹಳ ಚೆನ್ನಾಗಿ ಮಾಡುವುದಕ್ಕೋಸ್ಕರ ತಾವೂ ಕೂಡ ಅಲ್ಲಿ ಸಮ್ಮಿಶ್ರ ಸರ್ಕಾರವನ್ನು ಮಾಡಿದಿರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಹಾಗೆ ಇವತ್ತು ಇಲ್ಲಿ ನಾವು ಸಮ್ಮಿಶ್ರ ಸರ್ಕಾರವನ್ನು ಮಾಡಿರತಕ್ಕಂಥ ಉದ್ದೇಶ ಇವತ್ತು ಈ ರಾಜ್ಯದ ಜನತೆಗೆ ಈ ರಾಜ್ಯದ ಅಭಿವೃದ್ಧಿಗೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮತ್ತೊಂದು ಬಹಳ ಪ್ರಾಮುಖ್ಯವಾದಂತಹ ಕಾರಣವನ್ನು ಕೂಡ an underlining reason for this combination ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ನಾವು ಎರಡೂ ಪಕ್ಷದವರು ಒಂದು ಅದು ನಮ್ಮ ಉದ್ದೇಶ ಎನ್ನತಕ್ಕಂಥದ್ದು. ಏನು ನಮ್ಮ ಸಂವಿಧಾನಾತ್ಮಕವಾಗಿ ಇರತಕ್ಕಂಥಾದ್ದು, ನಮ್ಮ ಸಂವಿಧಾನದಲ್ಲಿ ಪ್ರಿಯಾಂಬಲ್‌ನಲ್ಲಿ ಹೇಳಿದ್ದಾರೆ. ನಾವು ಇನ್ನು ಮೊದಲನೆ ಪೇಜ್ ಮುಂದಕ್ಕೆ ಹೋಗಿದ್ದೇವೋ ಇಲ್ಲವೋ ಎಂದು ತಾವು ಯೋಚನೆ ಮಾಡಬೇಕಾಗುತ್ತದೆ. ಅದು 26ನೇ ನವೆಂಬರ್ 1949ರಲ್ಲಿ "we the people of India having solemnly resolved to constitute India into a sovereign, social, secular, democratic republic and to secure all citizen justice, liberty, equality and to promote fraternity. ಇದು ಬಹಳ ಮುಖ್ಯ ಇವತ್ತು. ಇಡೀ ಪ್ರಪಂಚವೇ ಒಂದು ರೀತಿಯಲ್ಲಿ ಗೊಂದಲಮಯವಾಗಿ ಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಏನು ನಾವು ನಮ್ಮ ಸಂವಿಧಾನದಲ್ಲಿ ಈ ಸೆಕ್ಯುಲರಿಸ್ಟಿಕ್ ಫ್ಯಾಬ್ರಿಕ್, ಇದನ್ನು ನಾವು ರಕ್ಷಣೆ ಮಾಡುತ್ತೇವೆಂದು ಹೇಳಿಕೊಂಡು ಪ್ರಮಾಣ ಮಾಡಿದ್ದೆವು, ಇವತ್ತು ಅದು ಆಗಲಿಲ್ಲವೆಂದು

ಬಹಳ ನೋವಿನಿಂದ ಹಾಗೂ ವ್ಯಸನದಿಂದ ಹೇಳಬೇಕಾಗುತ್ತದೆ. ಅನೇಕ ಘಟನೆಗಳು ಐವತ್ತು ವರ್ಷದಲ್ಲಿ ನಡೆದಿರತಕ್ಕಂಥಾದ್ದನ್ನು ಜ್ಞಾಪಿಸಬೇಕಾಗುತ್ತದೆ. ಡಿಸೆಂಬರ್ 6 1992ರಲ್ಲಿ ಪ್ರಪಂಚದಲ್ಲಿ ಭಾರತ ದೇಶ ತಲೆಯನ್ನು ತಗ್ಗಿಸತಕ್ಕಂಥ ಘಟನೆ, ಬಾಬ್ರಿ ಮಸೀದಿಯನ್ನು ಒಡೆದು, ಈ ದೇಶದ ಸೆಕ್ಯುಲರಿಸ್ಟಿಕ್ ಫ್ಯಾಬ್ರಿಕ್ ಅನ್ನು ಡೆಸ್ಟಾಯ್ ಮಾಡತಕ್ಕಂಥ ಕೆಲಸ ನಡೆಯಿತು ಎನ್ನುವುದನ್ನು ನಾವು ಇವತ್ತು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಅದು ಸಾಲದೆ ಫೆಬ್ರವರಿ 27, 2002ರಲ್ಲಿ ಗೋಧಾದಲ್ಲಿ ನಡೆದಂತಹ ಘಟನೆ. ತದನಂತರ ಇಡೀ ಗುಜರಾತ್‌ನಲ್ಲಿ ನಡೆದಂತಹ ಘಟನೆ ಸಾವಿರಾರು ಜನ ಮಕ್ಕಳು ಹೆಂಗಸರು, ಅವರು ಯಾರಿಗೂ ಸಂಬಂಧ ಇಲ್ಲ. ಅವರನ್ನು ಕೊಲೆ ಮಾಡತಕ್ಕಂಥ ಘಟನೆ ನಡೆಯಿತಲ್ಲಾ, ಇವತ್ತು ಯಾವ ಸುಕ್ಯುಲರ್ ಫ್ಯಾಬ್ರಿಕ್ ರಕ್ಷಣೆ ಮಾಡುತ್ತಿದ್ದೇವೆ. ಯಾವ ಸಂವಿಧಾನವನ್ನು ಇವತ್ತು ರಕ್ಷಣೆ ಮಾಡುತ್ತಿದ್ದೇವೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇಡೀ ದೇಶದಲ್ಲಿ ಜಗತ್ತೇ ತಲೆ ತಗ್ಗಿಸುವಂತೆ ನಿಖ್ಖಿರ ಸಾಮೂಹಿಕ ಹತ್ಯೆಯಾಯಿತಲ್ಲಾ ಡೆಲ್ಲಿಯಲ್ಲಿ ಅದನ್ನು ಡಾ: ಪರಮೇಶ್ವರ್ ಅವರು ಉಲ್ಲೇಖ ಮಾಡಿದರೆ ಒಳ್ಳೆಯದು.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು: ಮಾನ್ಯ ಹೆಗ್ಡೆಯವರೆ, ದಯವಿಟ್ಟು ನೋಡಿ ಇವತ್ತು ವಾಜಪೇಯಿ ಅವರು ಒಪ್ಪಿದ್ದಾರೆ. ಈ ದೇಶದ ಮಾಜಿ ಪ್ರಧಾನಿಗಳು ಒಪ್ಪಿದ್ದಾರೆ ತಾವು ಏನು ಹೇಳುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಪರಮೇಶ್ವರ್ ಅವರು ಮಾತನಾಡುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಬಾಬ್ರಿ ಮಸೀದಿ ಬಗ್ಗೆ ಮಾತನಾಡಿದರು. ಗೋಧ್ರಾ ಬಗ್ಗೆ ಮಾತನಾಡಿದರು. ಗುಜರಾತ್ ಬಗ್ಗೆ ಮಾತನಾಡಿದರು. ತಮಗೆ ಯಾವ್ಯಾವುದು ಬೇಕು, ಯಾವ್ಯಾವುದು ಬೇಡ ನೋಡಿ ಮಾತನಾಡುತ್ತಿದ್ದು, ಇವತ್ತು ಈ ಸದನ ಪ್ರಜಾಪ್ರಭುತ್ವದ ದೇವಾಲಯ. ಇಲ್ಲಿ ಬಂದು ಮತ್ತೆ ನಾವು ರಾಜಕಾರಣ ಮಾಡಬಾರದು. ಇವತ್ತು ಇಲ್ಲಿ ಬಂದು ದೇವರ ಮೇಲೆ ಯಾವ ರೀತಿ ಪ್ರಮಾಣ ಮಾಡಿಕೊಂಡು ಬರುತ್ತೇವೆ ಅಷ್ಟೇ ಆತ್ಮಸಾಕ್ಷಿಯಾಗಿ ನಾವು ಮಾತನಾಡಬೇಕು.

ಶ್ರೀ ಕೆ. ಅಭಯಚಂದ್ರ (ಸರ್ಕಾರಿ ಮುಖ್ಯ ಚೇತಕರು): ಅಷ್ಟಾದರೂ ಮಾಡಿ...

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಚೀಫ್ ವಿಪ್ ಹೀಗೆ ಮಾತನಾಡಿದರೆ ಏನು ಮಾಡಲಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ಸ್ವಾಮಿ, ವಿಪ್ ಬೇರೆಯವರನ್ನು ಕಂಟ್ರೋಲ್ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಯಾರನ್ನಾದರೂ ಒಬ್ಬರನ್ನು ನೇಮಿಸಿ. You must appoint a whip for the whip. ಇದೇನು ಸರ್ಕಾರದ ವಿಪ್ ಆಗಿ ಹೀಗೆ ಬಹೇವ್ ಅಸೆಂಬ್ಲಿಯಲ್ಲಿ ಮಾಡಿ ಬಿಟ್ಟರೆ ಹೇಗೆ? ಅವರು ಗೌವರ್ನ್‌ಮೆಂಟ್ ವಿಪ್. ಈ ವಿಪ್ ಕಂಟ್ರೋಲ್ ಮಾಡುವುದಕ್ಕೆ ಇನ್ನೊಂದು ವಿಪ್ ಮಾಡಬೇಕು. We have been observing. ಈ ಸದನ ಪ್ರಾರಂಭವಾದಾಗಿನಿಂದ ನೋಡುತ್ತಿದ್ದೇವೆ, ಈ ವಿಪ್ ಕಂಟ್ರೋಲ್ ಮಾಡುವವರು ಯಾರು?

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ): ಈ ಸರ್ಕಾರಕ್ಕೆ ಸಪೋರ್ಟ್ ಮಾಡತಕ್ಕಂಥ ವಿಷಯದಲ್ಲಿ ಅವರು ಮಾತನಾಡಿದ್ದಾರೆ. ಅವರು ಮಾತನಾಡಬಾರದು ಎಂದು ನಿರ್ಬಂಧ ಎಲ್ಲಿ ಇದೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಎಷ್ಟು ಸಲ ಎದ್ದಿದ್ದಾರೆ, ಎಷ್ಟು ಸಲ ಮಾತನಾಡಿದ್ದಾರೆ. ಒಬ್ಬರು ಸರ್ಕಾರದ ಸಚೇತಕರು ಮಾಡುವಂತಹ ಕೆಲಸವೇ ಇದು. ನೀವೂ ವಿಪ್ ಆಗಿದ್ದಿರಿ. ಅವರಿಗೆ ಪಾಠವನ್ನು ಹೇಳಿಕೊಡಿ.

ಶ್ರೀ ಸಿ.ಎಸ್. ನಾಡಗೌಡ: ನಾವು ವಿಪ್ ಆಗಿದ್ದರೂ ಮಾತನಾಡುತ್ತಿದ್ದೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾತನಾಡುತ್ತೇವೆ.

Sri K.R. Ramesh Kumar: Some of us, senior friends, we will advise out friends. It is alright. We will advise him.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಅವರುಗಳು ಎತ್ತಿರತಕ್ಕಂಥ ವಿಷಯ ಸೂಕ್ತವಾಗಿದೆ ಅದರೆ ಅವರು ವಿಪ್ ಆಗಿದ್ದಾರೆ ಎನ್ನುವ ಕಾರಣಕ್ಕೆ ಮಾತನಾಡುವ ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಆದರೆ ನಮ್ಮ ಸ್ಥಾನಕ್ಕೆ ಅನುಗುಣವಾದ ರೀತಿಯಲ್ಲಿ ನಿಯಂತ್ರಣವನ್ನು ನಾವು ಹಾಕಿಕೊಳ್ಳಬೇಕಾಗುತ್ತದೆ. ಅವರು ಹೊಸಬರು ಆಗಿದ್ದಾರೆ. ತಾವು ಸಹಕಾರ, ಸಲಹೆ ಕೊಡಿ, ಖಂಡಿತವಾಗಿಯೂ ಕೂಡ ನಿರೀಕ್ಷೆಗೂ ಸರಿಯಾಗಿ ಅವರ ಕೆಲಸ ಮಾಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಇವತ್ತು ಏನಾಗಿದೆಯೆಂದರೆ ಗೋಧ್ರ ಬಗ್ಗೆ ಮಾತನಾಡುತ್ತಿರುವಂತಹ ಸಂದರ್ಭದಲ್ಲಿ ರಾಮ ಭಕ್ತರು 60 ಜನರು ನಿರಪರಾಧಿಗಳೆಂದು ಏನು ಹೇಳುತ್ತಿದ್ದೀರಿ, ಅಂತಹ ನಿರಪರಾಧಿಗಳು ಭಕ್ತಿ ಪೂರ್ವಕವಾಗಿ ಅಲ್ಲಿ ಹೋಗಿಬಂದಂಥವರನ್ನು ಸಚೀವವಾಗಿ ದಹನ ಮಾಡಿದಂತಹ ಸಂದರ್ಭದಲ್ಲಿ, ಈ 60 ಜನರಿಗೆ ಏನೇನೂ ಸಂಬಂಧವಿಲ್ಲದವರು, ರೈಲಿನಲ್ಲಿ ಬೋಗಿಯಲ್ಲಿದ್ದ ಅವರಿಗೆ ಬೆಂಕಿ ಹಚ್ಚಿ ಸಚೀವವಾಗಿ ಕೊಂದಾಗ, ನಿಮ್ಮ ಸೆಕ್ಯೂಲರಿಸಂ ಎಲ್ಲಿಗೆ ಹೋಗಿತ್ತು? ನೀವು ಆಗ ಏಕೆ ಮಾತನಾಡಲಿಲ್ಲ?

ಶ್ರೀ ಆಂಜನಾಮೂರ್ತಿ: ಇದು ಯಾರು ಮಾಡಿದರು ಎಂದು ಏನು ಹೇಳಲೇ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಪರಮೇಶ್ವರ್‌ರವರು ಮಾತನಾಡುವಾಗ ಗೋಧ್ರದಲ್ಲಿ ನಡೆದಂತಹ ಘಟನೆ, ತದನಂತರ ಗುಜರಾತ್‌ನ ಉದ್ದಗಲಕ್ಕೂ ನಡೆದಂತಹ ಘಟನೆ ಎಂದು ಹೇಳಿದರೆ ಹೊರತು, ಯಾರು ಅಪರಾಧಿಗಳು, ಯಾರು ನಿರಪರಾಧಿಗಳು, ಯಾರು ಮಾಡಿದ್ದು ಸರಿಯೆಂದು ಅವರು ಹೇಳಲಿಲ್ಲ. ಅವರು ಮಾನವೀಯತೆಗೆ ಸಂಬಂಧಪಟ್ಟಂತೆ ಮಾತ್ರ ವಾಖ್ಯಾನ ಮಾಡಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೆನೆಂದರೆ, ಅವರು ಮಾತನಾಡುವಂತಹ ಸಂದರ್ಭದಲ್ಲಿ, ಸಿಖ್ ಹತ್ಯೆಗೆ ಸಂಬಂಧಪಟ್ಟಂತೆ ಕೂಡ ಉಲ್ಲೇಖ ಮಾಡಬೇಕಾಗಿತ್ತು. ಇದು ಎಲ್ಲಕ್ಕಿಂತ ಮೊದಲು ಆಗಿದ್ದು, ಇದನ್ನು ನೀವು ಮೊದಲು ಪ್ರಾರಂಭದಲ್ಲಿ ಹೇಳಬೇಕಾಗಿತ್ತು, ಅದನ್ನು ಉಲ್ಲೇಖ ಮಾಡಬೇಕಾಗಿತ್ತು.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ವಾಜಪೇಯಿಯವರು, ಗುಜರಾತ್‌ನಲ್ಲಿ ನಡೆದಂತಹ ಘಟನೆಯ ಬಗ್ಗೆ ಇದು ದೇಶಕ್ಕೆ ಒಂದು ದೊಡ್ಡ ಕಳಂಕವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಸಿಖ್ಖಿರನ್ನೇ ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದೆವಲ್ಲಾ...

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ರಾಷ್ಟ್ರಾಧ್ಯಕ್ಷರನ್ನು ಮಾಡಲು ಕಾಂಗ್ರೆಸ್ ಪಕ್ಷ ಬೆಂಬಲವನ್ನು ಕೊಟ್ಟಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, xxx xxx xxx

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ರಾಷ್ಟ್ರಪತಿಯವರ ಬಗ್ಗೆ ಯಾವುದೇ ಚರ್ಚೆಯಾಗಕೂಡದು. ಯಾವುದೇ ರೀತಿಯಲ್ಲಿ ಚರ್ಚೆ ಮಾಡುವಂಥಾದ್ದು ಒಳ್ಳೆಯದಲ್ಲ.

Sri K.R. Ramesh Kumar: Mr. Speaker Sir, Imediately you must advise your staff not to record anything. Nothing should go on record.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೇ, ಈಗ ರಾಷ್ಟ್ರಪತಿಯವರ ಬಗ್ಗೆ ಅಡಿರುವಂತಹ ಮಾತುಗಳೆಲ್ಲವನ್ನು ಕಡತದಿಂದ ತೆಗೆಯಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಪರಮೇಶ್ವರರವರು ತಮ್ಮ ಆತ್ಮ ಸಾಕ್ಷಿಗೆ ತಕ್ಕಂತೆ ಮಾತನಾಡಬೇಕು, ಇಲ್ಲವೆಂದರೆ, xxx xxxx xxxx ಮಾತನ್ನು ಹೇಳುತ್ತೇನೆ.

ಶ್ರೀ ಗೋಪಾಲ ಪೂಜಾರಿ: ಮೊದಲು ನೀವು ಕಲಿತುಕೊಳ್ಳಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಆತ್ಮ ಸಾಕ್ಷಿ ಎಂದರೆ ಹೇಗೆ, ಒಂದು ಕಡೆಯಿಂದ ಇನ್ನೊಂದು ಪಾರ್ಟಿಗೆ ಹೋಗಿ ಮಾತನಾಡುವುದು, ಇನ್ನೊಂದು ಕಡೆ ಎನ್‌ಡಿಎ ಪ್ರೋಗ್ರಾಂನಿಂದ ಅದನ್ನು ಬದಿಗಿಟ್ಟು, ಆಡಳಿತವನ್ನು ನಡೆಸಿಕೊಂಡು ಹೋಗುವುದಾ? ಇದಾ ಆತ್ಮ ಸಾಕ್ಷಿ ಎಂದರೆ, ಹೇಳುವುದು ಒಂದು, ಮಾಡುವುದು ಒಂದಾ...

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ನಾವು ಅದನ್ನು ಪೂರ್ಣ ಬಹುಮತ ಬಂದಾಗ ಮಾಡಿ ತೋರಿಸುತ್ತೇವೆ. ಈಗ ನಿಮ್ಮಂಥವರನ್ನು ಮೂಲೆಗೆ ತಳ್ಳುವುದಕ್ಕೋಸ್ಕರ ವಿಧಿ ಇಲ್ಲದೇ, ಅದನ್ನು ನಾವು ಪಕ್ಕಕ್ಕೆ ಸರಿಸಬೇಕಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಆ ಮಾತನ್ನು ಹೇಳಿದ್ದರಾ...

ಶ್ರೀ ಎಂ.ಪಿ. ಪ್ರಕಾಶ್: ತಮ್ಮ ಆತ್ಮ ಸಾಕ್ಷಿಯನ್ನು ಅಮಾನತ್ತಿನಲ್ಲಿಟ್ಟಿರುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಅದನ್ನು ನಾನು ಅಮಾನತ್ತಿನಲ್ಲಿ ಇಡುತ್ತೇನೋ, ಅದನ್ನು ಮೇಲೆ ತೆಗೆದುಕೊಂಡು ಹೋಗುತ್ತೇನೋ, ಆ ಪ್ರಶ್ನೆ ಬೇರೆ. ನನಗೆ

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಈಶ್ವರಪ್ಪನವರೇ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಬಿಟ್ಟರೆ, ನಾವು ನೀವು ಶೂದ್ರರು ಎಂದು ಸನಾತನ ಧರ್ಮ ಹೇಳುತ್ತದೆ. ಇಲ್ಲಿ ನಿಮ್ಮನ್ನು, ನಮ್ಮನ್ನೂ ಕೂಡ ದೂರ ಇಟ್ಟಿದ್ದಾರೆ.

---

xxx ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಒಂದೇ ಕುಟುಂಬದಲ್ಲಿ ಇರುವಂತಹ ವ್ಯಕ್ತಿಗಳು ಬೇರೆ ಬೇರೆ ತತ್ವ, ಸಿದ್ಧಾಂತಗಳನ್ನು ಇಟ್ಟುಕೊಂಡಿರುತ್ತಾರೆ, ಹಾಗೆ ನನ್ನ ಮತ್ತು ಡಾ: ಜಿ. ಪರಮೇಶ್ವರ್ ರವರ ಸಂಬಂಧವಾಗಿದೆ, ಅವರ ಬಗ್ಗೆ ನನಗೆ ಗೌರವವಿದೆ, ಆದರೆ ಅವರ ತತ್ವ, ಸಿದ್ಧಾಂತಗಳನ್ನು ಒಪ್ಪಬೇಕೆಂದು ಏನೂ ಇಲ್ಲ. ಅವರಿಗೆ ದೇವರ ಬಗ್ಗೆ ಆಸಕ್ತಿ ಇಲ್ಲ, ನನಗೆ ಆಸಕ್ತಿ ಇದೆ, ಒಂದೇ ಕುಟುಂಬದಲ್ಲಿ ಪ್ರಾಮಾಣಿಕವಾಗಿ ಜೀವನ ಮಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮನ್ನೂ ಕೂಡ ದೂರ ಇಟ್ಟಿದೆ, ಚಾತುರ್ವರ್ಣದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಬಿಟ್ಟರೆ, ಎಲ್ಲರೂ ಶೂದ್ರರು.

ಶ್ರೀ ಕೆ.ಎಸ್. ಈಶ್ವರಪ್ಪ: ಯಾರೋ ಕೆಲವು ನೀಚ ವ್ಯಕ್ತಿಗಳು ಇಟ್ಟಿರುವುದು.

ಶ್ರೀ ಎಸ್.ಎಸ್. ಪಾಟೀಲ್: ಡಾ: ಜಿ. ಪರಮೇಶ್ವರ್‌ರವರಷ್ಟೇ ಅಲ್ಲ, ನಾವು, ನೀವು ಕೂಡ ಶೂದ್ರರು, ನಿಮ್ಮ ಸನಾತನ ಧರ್ಮ ನಮ್ಮನ್ನು ದೂರವಿಟ್ಟಿರುವುದು. ನಿಮ್ಮ ಸನಾತನ ಧರ್ಮ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಬಿಟ್ಟರೆ, ಎಲ್ಲರೂ ಶೂದ್ರರು. ಅವರನ್ನು ಮುಟ್ಟಿಸಿಕೊಳ್ಳಬೇಡಿ ಎಂದು ಇಟ್ಟರು.

ಶ್ರೀ ಹೆಚ್.ಡಿ. ಬಸವರಾಜ್: ಬಾಬು ಜಗ ಜೀವನರಾವ್ ರವರು ಈ ದೇಶದ ಪ್ರೋತ್ಸಾಹಿಸಿದಂಥ ವ್ಯಕ್ತಿಗಳೇ ನಾವು. ಅಲ್ಲಿ ಎಷ್ಟರ ಮಟ್ಟಿಗೆ ಸನಾತನ ದರ್ಮವನ್ನು ಗೌರವಿಸಿದ್ದೇವೆ ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಉಲ್ಲೇಖ ಮಾಡಲು ಇಚ್ಛೆಪಡುತ್ತಿದ್ದೇವೆ...

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಡಾ: ಬಿ.ಆರ್. ಅಂಬ್ಡೇಡ್ಕರ್‌ರವರು ಚುನಾವಣೆಯಲ್ಲಿ ನಿಂತಾಗ ಕಾಂಗ್ರೆಸ್‌ನವರು ಸೋಲಿಸಿದವರು.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಹಾತ್ಮ ಗಾಂಧೀಜಿಯವರನ್ನು ಕೊಂದವರು ಯಾರು? ಅವರು ಬಿಜೆಪಿಯವರು.

ಶ್ರೀ ಕೆ.ಎಸ್. ಈಶ್ವರಪ್ಪ: ಮಹಾತ್ಮ ಗಾಂಧೀಜಿಯವರನ್ನು ಕೊಂದವರು ನೀವೇ, ಸುಪ್ರೀಂ ಕೋರ್ಟ್ ಈ ಬಗ್ಗೆ ಹೇಳಿದೆ, ಯಾರು ಕೊಲೆಗಡುಕರೆಂದು ಹೇಳಿದೆ, ಇದರ ಬಗ್ಗೆ ಏಕೆ ಚರ್ಚೆ ಮಾಡುತ್ತೀರಿ?

ಡಾ: ಪರಮೇಶ್ವರ್‌ರವರ ಬಗ್ಗೆ ನನಗೆ ತುಂಬಾ ಗೌರವವಿದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಬಾಬರಿ ಮಸೀದಿಯ ಘಟನೆ, ಗೋದ್ರ ಘಟನೆಯನ್ನು, ಈ ರೀತಿಯಾಗಿ ಬಳಸಿಕೊಂಡು ಮಾಡಿದಷ್ಟು ವ್ಯವಸ್ಥೆ ಈ ರಾಜ್ಯದ ಬಹಳಷ್ಟು ಜನರು ಒಪ್ಪುವುದಿಲ್ಲವೆನ್ನುವುದಕ್ಕೆ, ನಿಮ್ಮ ಸಾಕ್ಷಿ ಅಷ್ಟರಿಂದ ಇಷ್ಟಕ್ಕೆ ಬಂದಿರುವುದು, ಇದನ್ನು ಬಹಳ ಜನರು ಒಪ್ಪುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಈಶ್ವರಪ್ಪನವರೇ, ನಿಮ್ಮ academic interest ನಾನು ಕೇಳುತ್ತೇನೆ, ಡಾ: ಜಿ. ಪರಮೇಶ್ವರ್‌ರವರ ಬಗ್ಗೆ ನಿಮಗೆ ಅಪಾರವಾದ ಗೌರವವಿದೆ, ನಿಮಗೆ ಸನಾತನ ಧರ್ಮದಲ್ಲಿ ನಂಬಿಕೆ ಇದೆಯಾ, ಇಲ್ಲವಾ?

ಶ್ರೀ ಕೆ.ಎಸ್. ಈಶ್ವರಪ್ಪ: ಪೂರ್ಣವಾಗಿ ಇದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರ ಸ್ಥಾನ ಸನಾತನ ಧರ್ಮದಲ್ಲಿ ಏನು?

ಶ್ರೀ ಕೆ.ಎಸ್. ಈಶ್ವರಪ್ಪ: ನನಗೆ ವೈಯಕ್ತಿಕವಾಗಿ ಇರುವುದಕ್ಕೂ, ಅವರ ತತ್ವಕ್ಕೂ...

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇದು ಹೇಗೆ ಸಾಧ್ಯ? ಮಾನ್ಯ ಶ್ರೀರಾಮರೆಡ್ಡಿಯವರೇ, ತಾವು ಹೇಳಿ ಇದು ಹೇಗೆ ಸಾಧ್ಯ? ತಾವು ಸನಾತನ ಧರ್ಮದಲ್ಲಿ ನಂಬಿಕೆಯನ್ನೂ ಇಟ್ಟುಕೊಂಡು ಡಾ: ಜಿ. ಪರಮೇಶ್ವರ್‌ರವರ ಮೇಲೆ ಗೌರವವನ್ನು ಇಟ್ಟುಕೊಳ್ಳುವುದು ಹೇಗೆ? ಇದರ ಬಗ್ಗೆ ಮಾನ್ಯ ಎಂ.ಪಿ. ಪ್ರಕಾಶ್‌ರವರೇ, ತಾವಾದರೂ ಗೈಡ್ ಮಾಡಿ. ಇದು ಹೇಗೆ ಸಾಧ್ಯ? ಇದು ಆತ್ಮ ಸಾಕ್ಷಿಗೆ ಅನುಗುಣವಾಗಿ ಇದೆಯಾ?

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತೇನೆ, ಒಂದು ಕುಟುಂಬದಲ್ಲಿ ಅಣ್ಣ–ತಮ್ಮ, ಅಕ್ಕ–ತಂಗಿ, ತಾಯಿ–ತಮ್ಮ, ಇರುತ್ತಾರಲ್ಲ...

ಶ್ರೀ ಕೆ.ಆರ್. ರಮೇಶ್‌ಕುಮಾರ್: ಅವರನ್ನು ಊರ ಹೊರಗೆ ಇಟ್ಟಿದ್ದೇವೆ, ಅವರನ್ನು ನಾವು ಸಹಸ್ರಾರು ವರ್ಷಗಳಿಂದ ಮುಟ್ಟಿಸಿಕೊಂಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಯಾರು?

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇವತ್ತು ಗೌರವವಿದೆ ಎಂದು ಹೇಳಿದರೆ, "ಮನು" ಎಂಬು ಮಹಾ ಪುರುಷ ಸೃಷ್ಟಿ ಮಾಡಿದ, ಅವನೇ ಮಾಡಿದ್ದು,

ಶ್ರೀ ಕೆ.ಎಸ್. ಈಶ್ವರಪ್ಪ: ದೂರ ಇಟ್ಟಿರುವವರು ಅಸ್ಪೃಶ್ಯರು, ನಾವು, ನೀವು ಅಲ್ಲ.

ಶ್ರೀ ವಿಶ್ವೇಶವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೇ, ಮಾನ್ಯ ರಮೇಶ್‌ಕುಮಾರ್‌ರವರು ಅಧ್ಯಕ್ಷರಾಗಿದ್ದರೆ, ಈ ರೀತಿ ದಾರಿ ತಪ್ಪುತ್ತಿರಲಿಲ್ಲ, ಅವರು ಅಧ್ಯಕ್ಷರಾಗಿದ್ದಾರೆ ಒಳ್ಳೆಯದಾಗುತ್ತಿತ್ತು, ನಮಗೆ ಹೀಗೆ ದಾರಿ ತಪ್ಪುತ್ತಿರಲಿಲ್ಲ,

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ಶ್ರೀ ಕೆ.ಎಸ್. ಈಶ್ವರಪ್ಪನವರಿಗೆ ಮತ್ತು ಶ್ರೀ ಶಿವಣ್ಣನವರಿಗೆ ಏಕೆ ಇಷ್ಟು ಆತುರವಾಯಿತೋ, ಗೊತ್ತಾಗಲಿಲ್ಲ, ನಾನು ಇಲ್ಲಿ ತಮ್ಮ ಹೆಸರುಗಳನ್ನು ಹೇಳಲಿಲ್ಲ. ನಾನು ಬಿಜೆಪಿ ಎನ್ನಲಿಲ್ಲ, ವಿಹೆಚ್‌ಪಿ ಎನ್ನಲಿಲ್ಲ, ಆರ್‌ಎಸ್ ಎಸ್ ಎಂದು ಹೇಳಲಿಲ್ಲ, ಬಜರಂಗದಳ ಎನ್ನಲಿಲ್ಲ, ನಾನು ಯಾವುದನ್ನೂ ಹೇಳಲಿಲ್ಲ, ನಾನು ಹೇಳುತ್ತಿದ್ದಂಥಾದ್ದು, ಈ ರಾಷ್ಟ್ರದ ಸಂವಿಧಾನ, ನಮಗೆ ಏನು ಹೇಳಿದೆ. ತಾವು ಸಂವಿಧಾನಕ್ಕೆ ಬೆಲೆ ಕೊಡುತ್ತಿರಲ್ಲವೇ? ಆ ಸಂವಿಧಾನದ ಪುಸ್ತಕದಲ್ಲಿರುವ ಮೊದಲನೆಯ ಪುಟದಲ್ಲಿ ಮೊದಲನೆಯ ಆಕ್ಷರ, ಪ್ರಿಯಾಂಬಲ್‌ನಲ್ಲಿ ಎರಡನೆಯ ಪೇಜ್‌ಗೂ ಕೂಡ ನಾವು ಹೋಗಲಿಲ್ಲ. ನಾನು ಮೊದಲನೆಯ ಪೇಜ್‌ನಲ್ಲಿ ಹೇಳಿರುವಂಥಾದ್ದನ್ನು ತಮಗೆ ಜ್ಞಾಪಕ ಮಾಡಿಕೊಟ್ಟಿದ್ದೇನೆ, ಅದರಲ್ಲಿ ಸಿಖ್‌ರ ಮೇಲೆ ಗಲಾಟೆಯಾಯಿತು, ಅಲ್ಲಿ ಹೊಡೆದಾಡಿದರು, ಅವರನ್ನು ಕೊಂದೆ, ಮಾಡಿದರು, ಎಂದು ನಮ್ಮ ಮಾನ್ಯ ಪ್ರಧಾನ ಮಂತ್ರಿಯವರೇ, ಹೇಳಿದ್ದಾರೆ. ಅದೂ ಕೂಡ ಆಗಬಾರದೆಂದು, ನಾನು ಒಂದು ವರ್ಗಕ್ಕೆ ಸೀಮಿತವಾಗಿ ಹೇಳುತ್ತಾ ಇಲ್ಲ, ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ತಾವು ಏಕೆ ಅಷ್ಟು ಗೊಂದಲವನ್ನು ಮಾಡಿಕೊಳ್ಳುತ್ತೀರಿ, ತಾವು ಬಹಳ ಒಳ್ಳೆಯವರು ನೋಡುವುದಕ್ಕೆ ಎಷ್ಟು ಚೆನ್ನಾಗಿ ಕಾಣುತ್ತೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನಗೆ ಮದುವೆಯಾಗಿ ಎರಡು ಮಕ್ಕಳು ಆಗಿವೆ, ಮತ್ತೆ ನಾನು ಚೆನ್ನಾಗಿ ಕಾಣುತ್ತೇನೆಂದು ಸುದ್ದಿ ಮಾಡುವುದು, ಬೇರೆ ಏನೋ ಆಗುವುದು ಬೇಡ.

ಡಾ: ಜಿ. ಪರಮೇಶ್ವರ್: ನಾನು ಮನಸ್ಸು ಚೆನ್ನಾಗಿ ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಅವರು ನೋಡುವುದಕ್ಕೆ ಚೆನ್ನಾಗಿದ್ದೆನೆಂದು ಕರಿ ಬಟ್ಟೆಯನ್ನು ಹಾಕಿದ್ದಾರೆ, ದೃಷ್ಟಿಯಾಗಬಾರದೆಂದು ಕರಿ ಬಟ್ಟೆಯನ್ನು ಹಾಕಿದ್ದಾರೆ.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ನಾನು ಹೇಳುವುದನ್ನು ಮರೆತೆ, ಅವರೆಲ್ಲಾ ಕೇಸರಿ ಬಣ್ಣದ ಬಟ್ಟೆಯನ್ನು ಹಾಕಿಕೊಂಡರೆ ಎಷ್ಟು ಚೆನ್ನಾಗಿ ಕಾಣುತ್ತಾರೆ. ಇವತ್ತು ಏಕೋ, ಅಷ್ಟು ಸರಿ ಕಾಣುತ್ತಿಲ್ಲ, ಬಹಳ ಡಲ್ ಆಗಿ, ಒಬ್ಬೊಬ್ಬರು ನಿಮ್ಮಲೇ ನೋಡಿಕೊಳ್ಳಿ ಮಾನ್ಯ ಯಡಿಯೂರಪ್ಪ ನವರಿಗೆ ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಅವರು ಮಾನ್ಯ ವಾಜಪೇಯಿಯವರ ಸ್ಟೇಟ್‌ಮೆಂಟ್‌ಗೆ ಕರಿಬಟ್ಟೆಯನ್ನು ಹಾಕಿ, ಪ್ರೊಟೆಸ್ಟ್ ಮಾಡುತ್ತಿದ್ದಾರೆ.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಬಗ್ಗೆ ನನಗೆ ಬಹಳ ಗೌರವವಿದೆ, ಅವರು ಹಿರಿಯರು, ಅವರೂ ಕೂಡ ಕರಿ ಬಟ್ಟೆಯನ್ನು ಹಾಕಿದ್ದಾರೆ, ಅದು ಅಷ್ಟು ಚೆನ್ನಾಗಿ ಕಾಣುವುದಿಲ್ಲ, ದಯವಿಟ್ಟು ನಾಳೆಯಿಂದ ಅದರೂ ತೆಗೆದುಬಿಡಿ, ಅದು ಸರಿ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಹಾಗಾದರೆ ಯಾವ ಬಟ್ಟೆಯನ್ನು ಹಾಕಿಕೊಳ್ಳಬೇಕು?

ಡಾ: ಜಿ. ಪರಮೇಶ್ವರ: ಅವರು ಮೊದಲಿನಿಂದಲೂ ಕೇಸರಿ ಬಟ್ಟೆಯನ್ನು ಹಾಕಿಕೊಂಡಿದ್ದಾರಲ್ಲಾ.

ಶ್ರೀ ವಾಟಾಳ್ ನಾಗರಾಜ್: ಆ ಕೇಸರಿ ಬಟ್ಟೆಯನ್ನು ಹಾಕಿಕೊಂಡು ಚೆನ್ನಾಗಿ ಕಾಣುತ್ತಾರಾ?

ಡಾ: ಜಿ. ಪರಮೇಶ್ವರ್: ಆ ಕೇಸರಿ ಬಟ್ಟೆಯಲ್ಲಿ ಬಹಳ ಚೆನ್ನಾಗಿ ಕಾಣುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್: ಅವರು ಮುಖ್ಯಮಂತ್ರಿಯಾಗುತ್ತಾರೆಂದರೆ ಯಾವ ಬಟ್ಟೆಯನ್ನಾದರೂ ಹಾಕಿಕೊಳ್ಳಲಿ, ಅದಕ್ಕೆ ದೇವರು ಅನುಕೂಲ ಮಾಡಿಕೊಡಬೇಕಲ್ಲಾ.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ, ಎಂದರೆ, ಇಡೀ ಪ್ರಪಂಚದಲ್ಲಿ ಭಾರತ ದೇಶದ ಬಗ್ಗೆ ಬಹಳ ಗೌರವವಿದೆ, ನಮ್ಮ ಸಂಸ್ಕೃತಿಯ ಬಗ್ಗೆ, ನಾಗರೀಕತೆಯ ಬಗ್ಗೆ, ನಾವು ನಡೆದುಕೊಳ್ಳುವಂತಹ, ರೀತಿನೀತಿಗಳ ಬಗ್ಗೆ, ಬಹಳ ಗೌರವವಿದೆ ಏಕೆಂದರೆ we are one of the oldest citizens, civilization.

ಹೀಗಿರುವಾಗ ಇಂಥ ಘಟನೆಗಳು ನಡೆದಾಗ ನಾವು ಅಂತರಾಷ್ಟ್ರೀಯ ಮಟ್ಟದಲ್ಲಿ ತಲೆತಗ್ಗಿಸತಕ್ಕಂಥಾದ್ದು ಆಗುತ್ತದೆ ಅನ್ನತಕ್ಕಂಥಾದ್ದಕ್ಕೆ ಹೇಳಿದೆ. ಅದನ್ನು ನಾವು ಹೇಳಿಲ್ಲ. ನಮ್ಮ ಪ್ರಧಾನ ಮಂತ್ರಿಗಳಾಗಿದ್ದಂಥ ಅತ್ಯಂತ ಗೌರವಾನ್ವಿತ ಶ್ರೀ ವಾಜಪೇಯಿಜಿರವರು ಹೇಳಿದ್ದಾರೆ. ಅದು ಇವತ್ತಿನ ದಿವಸ ಪತ್ರಿಕೆಗಳಲ್ಲಿ ಬಹಳ ಚೆನ್ನಾಗಿ ಬಂದಿದೆ. ಎಲ್ಲಾ ಪತ್ರಿಕೆಗಳಲ್ಲೂ ಬರೆದಿದ್ದಾರೆ. ಅವರೇ ಹೇಳಿದ್ದಾರೆ. ಇದು 2002ರಲ್ಲಿ ವಾಜಪೇಯಿಯವರು ಹೇಳಿದ ಮಾತು. ಅದನ್ನು ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅವರು ಆ ಸ್ಥಳಕ್ಕೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಅವರೇ ಮಾಡಿದಂಥ ಸ್ಟೇಟ್‌ಮೆಂಟ್‌ಗಳಿವು. ಅವುಗಳನ್ನು ಇವತ್ತಿನ ಪತ್ರಿಕೆಗಳಲ್ಲಿ ಹಾಕಿದ್ದಾರೆ.

"It is high-time officials and politicians understand their responsibilities and do their job properly. I will not allow this to continue. I don't know with what face I will go abroad".

He was scheduled to leave for Singapore and Cambodia after the riots. "you have become homeless in your own home and refugees in your own country. It is a shame.

ಹೀಗೆ ಅವರು ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವುಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ತಮಗೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ?

ಡಾ: ಜಿ. ಪರಮೇಶ್ವರ್: ಗೌತ್ತಿಲ್ಲ ಮಾನ್ಯ ಅಧ್ಯಕ್ಷರೇ, ನನಗೆ ಹೆಚ್ಚಿಗೆ ಮಾತನಾಡಿ ಅಭ್ಯಾಸವಿಲ್ಲ. ಆದಷ್ಟು ಬೇಗನೆ ಮುಗಿಸಿಬಿಡುತ್ತೇನೆ. ಇನ್ನೊಂದು ಪಿರಿಯಡ್ ಅಂತೂ ಬೇಕು. ಇವತ್ತು ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆ ಎಂದರೆ, ಚುನಾವಣೆಗೆ ಮುಂಚೆ ಕರ್ನಾಟಕದಲ್ಲಿ ಅನೇಕ ರಾಷ್ಟ್ರ ಮಟ್ಟದ ನಾಯಕರುಗಳು, ಬೇರೆಬೇರೆ ಸಂಘಟನೆಗಳ ಅಧ್ಯಕ್ಷರುಗಳೆಲ್ಲಾ ಬಂದು ಏನು ಹೇಳಿದರು ಎಂದರೆ, ಕರ್ನಾಟಕದಲ್ಲಿ ಜನರು ಬಹಳ ಶಾಂತಿಯಿಂದ ಇರತಕ್ಕಂಥವರು, ಕರ್ನಾಟಕದವರು ಬಹಳ ಶಾಂತಿ ಪ್ರಿಯರು. ನಾವು ಹೊರಗಡೆಗೆ ಹೋದರೆ ನಮ್ಮನ್ನು ನೋಡಿ ಅಲ್ಲಿನ ಜನ ಬಹಳ ಮೆಚ್ಚಿಕೊಳ್ಳುತ್ತಾರೆ. ಅಂಥ ಕರ್ನಾಟಕದಲ್ಲಿ ಬಂದು ಅವರು ಬಹಳ ದೊಡ್ಡದೊಡ್ಡದಾಗಿ ಭಾಷಣ ಮಾಡಿದರು. ಏನು ಭಾಷಣ ಮಾಡಿದರೆಂದರೆ,

"We will make Karnataka, we will make Chickmagalore as second Ayodhya".

ಚಿಕ್ಕಮಗಳೂರು, ದತ್ತಪೀಠದ ಇಷ್ಯೂ ಬಂದಂಥ ಸಂದರ್ಭದಲ್ಲಿ, ಅಲ್ಲಿಗೆ ಬಂದಂಥ ರಾಷ್ಟ್ರ ಮಟ್ಟದ ಸಂಘಟನೆಗಳ ಮುಖ್ಯಸ್ಥರು ಏನು ಭಾಷಣ ಮಾಡುತ್ತಾರೆಂದರೆ, ಚಿಕ್ಕಮಗಳೂರನ್ನು, ದತ್ತಪೀಠವನ್ನು ಎರಡನೇ ಆಯೋಧ್ಯೆ ಮಾಡುತ್ತೇವೆ ಎಂದು ಭಾಷಣ ಮಾಡುತ್ತಾರೆ. ಬಹಳ ಅಘಾತಕಾರಿ, ಅಪಾಯಕಾರಿ ಸ್ಟೇಟ್‌ಮೆಂಟ್‌ಗಳವು. ಅದಕ್ಕಾಗಿ ಕಾಂಗ್ರೆಸ್ ಪಕ್ಷದವರಾದ ನಮಗೆ ಮತ್ತು ಜನತಾದಳ(ಎಸ್)ನವರಿಗೆ ಏನು ಯೋಚನೆ ಬಂತೆಂದರೆ, ಇಂಥ ಘಟನೆ ನಮ್ಮ ರಾಜ್ಯದಲ್ಲಿ ಆಗಲು ಅವಕಾಶವಾಗಿ ಬಿಟ್ಟಿತು, ಕರ್ನಾಟಕ ರಾಜ್ಯದಲ್ಲಿ ನಾವು ಶಾಂತಿಯಿಂದ ಇದ್ದೇವೆ, ನಾವು ಯಾವತ್ತೂ ಕೂಡ ಅಭಿವೃದ್ಧಿಯ ಕಡೆ ಯೋಚನೆ ಮಾಡುತ್ತೇವೆ. ಹೀಗಿರುವಾಗ ಇಂಥ ಒಂದು ಘಟನೆ ನಡೆದರೆ ಅದರಿಂದ ಸಾವಿರಾರು ಜನರು ಸಾಯಬಹುದು ಅಥವಾ ನಮ್ಮ ಇಡೀ ಸಮಾಜದ ವ್ಯವಸ್ಥೆಯೇ ಹೆಚ್ಚು ಕಡಿಮೆಯಾಗಬಹುದು ಎನ್ನುವ ಮತ್ತೊಂದು ವಿಚಾರವನ್ನೂ ಸಹ ನಾವು ಈ ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡುವಂಥ ಸಂದರ್ಭದಲ್ಲಿ ತಲೆಯಲ್ಲಿ ಇಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈ ಯೋಚನೆ ಚುನಾವಣೆಗೆ ಮೊದಲು ತಮಗೆ ಏಕೆ ಬರಲಿಲ್ಲ ಎಂದು ಹೇಳಬೇಕು. ತಾವು ಇದನ್ನು ಚುನಾವಣೆಗೆ ಮೊದಲೇ ಮಾಡಿದ್ದರೆ ಹ್ಯಾಟ್ಸ್-ಆಪ್ ಎನ್ನುತ್ತಿದ್ದೆವು. ಮೊದಲೇ ಏಕೆ ಈ ಯೋಚನೆ ಬರಲಿಲ್ಲ?

Sri K.R. Ramesh Kumar: It is very simple. ಎಲೆಕ್ಷನ್ ಮೊದಲು, ನಾವೇ ಸ್ವತಃ ಬರಬಹುದು ಎನ್ನತಕ್ಕಂಥ ಭಾವನೆಯಲ್ಲಿದ್ದೆವು.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಇಲ್ಲಿದ್ದವರು. ನೀವ್ಯಾಕೆ ಎಲ್ಲದಕ್ಕೂ ಎದ್ದುನಿಂತು ಹೇಳುತ್ತೀರಿ. ಅವರು ಹೇಳಲಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾಧುಸ್ವಾಮಿಯವರೇ, ಅವರು ಅಲ್ಲಿರಲಿಲ್ಲ, ಅಲ್ಲಿದ್ದರು (ಅಧ್ಯಕ್ಷ ಪೀಠದಲ್ಲಿ)

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವೂ ಕುಳಿತುಕೊಳ್ಳಿ. ತಾವೇನು ಭಾರೀ ದೊಡ್ಡ ಸಾಧನೆ ಮಾಡಿಲ್ಲ. ಇಲ್ಲಿ ಚೂರಿ ಹಾಕಿಯೇ ನೀವು ಅಲ್ಲಿಗೆ ಹೋಗಿರುವುದು.

ಶ್ರೀ ಎಸ್.ಎಸ್. ಪಾಟೀಲ್: ಕೋಮುವಾದಿಗಳು ಬೇಡ ಎಂದು ನೀವು ಅಲ್ಲಿ ಕುಳಿತಿದ್ದೀರಿ. ಪುನಃ ಅಲ್ಲಿಗೇ ಹೋಗಿ ಗಂಟುಬಿದ್ದಿರಿ.

ಶ್ರೀ ಬಸವರಾಜ ರಾಯರೆಡ್ಡಿ: ನೀವು ಕೋಮುವಾದಿ ಪಕ್ಷಗಳ ಜೊತೆ ಹೋಗಬೇಡಿ ಎಂದು ಹೇಳಿದರೂ ನೀವು ಹೋದಿರಿ. ಅದಕ್ಕಾಗೇ ನಾವುಇಲ್ಲಿಗೆ ಬಂದದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಮಗೆ ಬಂದದ್ದನ್ನು ನಾವು ಅನುಭವಿಸಿಕೊಂಡು ಕುಳಿತಿದ್ದೇವೆ. ನೀವು ಶರಣರು, ಪಾಟೀಲರ ಬಾಯಲ್ಲಿ ನಮಗೆ ವೇದಾಂತ ಬೇಡ.

ಶ್ರೀ ಎಸ್. ರಾಜೇಂದ್ರನ್: ತಾವು ಪೇಪರ್‌ನಲ್ಲಿ ಇರುವುದನ್ನು ಓದುವ ಟೈಂನಲ್ಲಿ ಇಲ್ಲಿ ಎಲ್ಲರೂ ಸೈಲೆಂಟಾಗಿದ್ದರು. ಆದರೆ ಇವರು ಪೇಪರ್‌ನಲ್ಲಿ ಬಂದಿರುವುದನ್ನು ಓದುವಂಥ ಟೈಂನಲ್ಲಿ ಮಾತ್ರ ಪೇಪರ್‌ನಲ್ಲಿ ಬಂದದ್ದೆಲ್ಲಾ ಕರೆಕ್ಟ್ ಅಲ್ಲ ಎಂದು ಹೇಳುವ ನೀವು, ತಾವು ಓದುವಂಥ ಟೈಂನಲ್ಲಿ ಮಾತ್ರ ಪೇಪರ್‌ನಲ್ಲಿ ಬರುವಂಥ ನ್ಯೂಸ್ ಕರೆಕ್ಟ್ ಎಂದು ಹೇಳುವಿರಾ?

ಡಾ: ಜಿ. ಪರಮೇಶ್ವರ್: ನಾನು ಇದನ್ನು ರೆಫರೆನ್ಸ್‌ಗಾಗಿ ಮಾಡುತ್ತಿದ್ದೇನೆ. There is a lot of difference between a reference and trying to prove a point.

Sri S. Rajendran: Media is a media. When they are referring very clearly,

ಇವರು ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿದ ತಕ್ಷಣ, ಪೇಪರ್‌ನಲ್ಲಿ ಬರುವುದೆಲ್ಲಾ ಕರೆಕ್ಟ್ ಆಗಿರುವುದಿಲ್ಲ ಬಿಡಿ, ಅದರ ಬಗ್ಗೆ ಮೋಷನ್ ತೆಗೆದುಕೊಂಡು ಬನ್ನಿ ಎಂದು ಹೇಳಿದಿರಿ. You are quoting the same media. 2002ರಲ್ಲಿ ವಾಜಪೇಯಿಯವರು ಹೀಗೆ ಹೇಳಿದ್ದಾರೆ ಎಂದು ಹೇಳುತ್ತಿದ್ದೀರಿ. How could it be? There should be some via media...

ಡಾ: ಜಿ. ಪರಮೇಶ್ವರ್: ಮಾರ್ಕ್‌ಟೆಲ್ಲಿ ಎನ್ನುವ ಒಬ್ಬರು ಬಿಬಿಸಿ ಕರೆಸ್ಪಾಂಡೆಂಟ್ ಇದ್ದಾರೆ. ಈಗ ಅವರು ಇಂಡಿಯಾದಲ್ಲೇ ಇದ್ದಾರೆ, ಬೇರೆ ಕಡೆ ಜರ್ನಲಿಸ್ಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು 25 ವರ್ಷಗಳ ಕಾಲ ಈ ದೇಶದಲ್ಲಿ ಬಿಬಿಸಿಯ ಕರೆಸ್ಪಾಂಡೆಂಟಾಗಿ ಕೆಲಸ ಮಾಡಿದ್ದರು. ಅವರು ಒಂದು ಪುಸ್ತಕ ಬರೆದರು. The book's name in "India in slow motion." ಅದರಲ್ಲಿ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ದೇಶದ ಬೆಳವಣಿಗೆಯ ಬಗ್ಗೆ, ಅಭಿವೃದ್ಧಿಯ ಬಗ್ಗೆ, ಜಾತೀಯತೆಯ ಬಗ್ಗೆ, ರಾಮನ ಬಗ್ಗೆ, ಕೃಷ್ಣನ ಬಗ್ಗೆ, ಹೀಗೆ ಎಲ್ಲದರ ಬಗ್ಗೆಯೂ ಬರೆದರು. ಕನ್‌ಕ್ಲೂಷನ್ ಮಾಡುವಾಗ ಹೀಗೆ ಬರೆದಿದ್ದಾರೆ. ಅದನ್ನು ಓದೆ ನನಗೆ ಬಹಳ ಬೇಜಾರಾಯಿತು. "On 27th February, 2002, the Sabarmathi Express

getting towards the end of its two-day journey from Varanasi to Ahmedabad..." ಅ ಘಟನೆಯನ್ನು ಅವರು ಕನ್‌ಕ್ಲೂಷನ್‌ನಲ್ಲಿ ಬರೆದಿದ್ದಾರೆ. ಏಕೆಂದರೆ ಇವರು ಬಹಳ Internationally renowed journalist. ಈ ಪುಸ್ತಕ ಇಡೀ ಪ್ರಪಂಚಕ್ಕೇ ಹೋಗುತ್ತದೆ. ಜೊತೆಗೆ, it is going to be a permanent document in the annals of history of this country. ಇದರಲ್ಲಿ ಅವರು ಹೀಗೆ ಬರೆಯುತ್ತಾರೆ.

"The State, including elected representatives, the political executives, the administration and the police, abdicated its responsibility to protect all its citizens. For worse, it actually connived in the naming, raping and butchering of hundreds of women and children of Gujurath". ಇದು ಪರ್ಮನೆಂಟ್ ಡಾಕ್ಯುಮೆಂಟ್. ಇದನ್ನು ಓದಿದಂಥ ಹೊರಗಿನವರು ಯಾರಾದರೂ ಭಾರತದ ಬಗ್ಗೆ, ಭಾರತದ ಸಮಾಜದ ಬಗ್ಗೆ, ಇಲ್ಲಿನ ಅಡ್ಮಿನಿಸ್ಟ್ರೇಷನ್ ಬಗ್ಗೆ, ಇಲ್ಲಿನ ರಾಜಕೀಯ ವ್ಯವಸ್ಥೆಯ ಬಗ್ಗೆ ಅಥವಾ ನಮ್ಮ ಬಗ್ಗೆ ಯಾವ ಕಲ್ಪನೆ ಮಾಡಿಕೊಳ್ಳಬಹುದು? ಅದಕ್ಕೋಸ್ಕರ ನಾನು ಇದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇದು ಈ ದೇಶದಲ್ಲಿ ಆಗಬಾರದು. ಅದರಲ್ಲೂ ವಿಶೇಷವಾಗಿ, ಇಂಥದು ನಮ್ಮ ರಾಜ್ಯದಲ್ಲಿ ಆಗಬಾರದು ಎನ್ನುವ ಕಾರಣಕ್ಕಾಗಿಯೇ ನಾವು ಇವತ್ತು ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡುವಂಥ ಅನಿವಾರ್ಯತೆ ಬಂದಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ದೆಹಲಿಯಲ್ಲಿ ಸಿಖ್ಖರ ಮೇಲೆ ಹಲ್ಲೆ ನಡೆಯಿತಲ್ಲಾ, ಅದರ ಯಾವ ಪುಸ್ತಕವೂ ನಿಮಗೆ ಸಿಗಲಿಲ್ಲವೇ?

ಡಾ: ಜಿ. ಪರಮೇಶ್ವರ್: ಹೌದು, ಅದನ್ನು ಹೇಳಿದೆನಲ್ಲಾ. I accepted that also. ಅದನ್ನು ತಂದಾಗ ನೀವು ಇಲ್ಲಿ ಓದಿ ಸ್ವಾಮಿ.

ಶ್ರೀ ಆರಗ ಜ್ಞಾನೇಂದ್ರ: ಅದನ್ನೂ ರೆಫರ್ ಮಾಡಿ. ಅಂಥದರಿಂದೆಲ್ಲಾ ಭಾರತಕ್ಕೆ ಗೌರವ ಬರುತ್ತದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹುಬ್ಬಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ಮೈದಾನದಲ್ಲಿ ಭಾರತದ ಧ್ವಜ ಹಾರದಿದ್ದರೂ ನಾವು ಸುಮ್ಮನಿರಬೇಕು. ಬಾಬಾ ಬುಡನ್‌ಗಿರಿ ದತ್ತಪೀಠ ಎಂದು ಇಡೀ ಜಗತ್ತಿಗೆ ಗೊತ್ತಿರುವಂಥಾದ್ದು, ಅದು ದತ್ತಪೀಠ ಆಗಬೇಕು ಎಂದು ಹೇಳುವುದೂ ತಪ್ಪು ಎನ್ನುವುದು ಡಾ: ಪರಮೇಶ್ವರ್‌ರವರ ವಾದವಾದರೆ ಇದನ್ನು ಹೇಗೆ ಒಪ್ಪುವುದಕ್ಕೆ ಸಾಧ್ಯ? ಹುಬ್ಬಳ್ಳಿಯಲ್ಲಿ ಭಾರತದ ಧ್ವಜ ಹಾರಲೇಬೇಕು, ದತ್ತಪೀಠವನ್ನು ದತ್ತಪೀಠ ಎಂದು ಹೇಳಲೇಬೇಕು. ಅಂಥಾದ್ದಕ್ಕೂ ಒಂದು ಅಪಸಂಶಯದ ಮಾತುಗಳನ್ನಾಡಿ ನಮ್ಮ ಆತ್ಮಗೌರವದ, ಜನರ ಸ್ವಾಭಿಮಾನದ ಪ್ರಶ್ನೆಯನ್ನು ಈ ಸದನದಲ್ಲಿ ಎತ್ತುವುದು ಉಚಿತವಲ್ಲವೆಂದು ಅನ್ನಿಸುತ್ತದೆ.

ಶ್ರೀ ಡಿ.ಆರ್. ಪಾಟೀಲ್: ಹುಬ್ಬಳ್ಳಿಯಲ್ಲಿ ಹಾರಿಸುವುದಕ್ಕೆ ಮೊದಲು ನಾಗಪುರದಲ್ಲೂ ಹಾರಿಸಿ ಬಂದಿದ್ದರೆ ಬಹಳ ಸಂತೋಷವಾಗುತ್ತಿತ್ತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾವು ಕಾಶ್ಮೀರಕ್ಕೂ ಹೋಗಿ ಬಂದಿದ್ದೇವೆ. ಏಕತಾ ಯಾತ್ರೆಯನ್ನು ಮಾಡಿ ಕಾಶ್ಮೀರದ ಲಾಲ್‌ಚೌಕದಲ್ಲೂ ನಾವು ಭಾರತದ ಧ್ವಜವನ್ನು ಹಾರಿಸಿ ಬಂದಿದ್ದೇವೆ.

ಅಲ್ಲಿ ಪಾಕಿಸ್ಥಾನದ ಧ್ವಜವನ್ನು ಇಳಿಸಿ, ಭಾರತದ ಧ್ವಜವನ್ನು ಏರಿಸಿ, 'ಭಾರತ್‌ಮಾತಾ ಕೀ ಜೈ' ಎಂದು ನಾವು ಹೇಳಿ ಬಂದಿದ್ದೇವೆ. ಬರೀ ಹುಬ್ಬಳ್ಳಿಯಲ್ಲಷ್ಟೇ ನಾವು ಧ್ವಜ ಹಾರಿಸಲಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಹೀಗೆ ಹೇಳುವುದರಿಂದ, ಇವರಿಗೆ ಯಾರ್ಯಾರು ಓಟು ಬರುತ್ತದೆ ಎಂದು ನಿರೀಕ್ಷೆ ಮಾಡುತ್ತಿದ್ದರೋ ಅವರೇ ಈ ಸಾರಿ ಇವರಿಗೆ ಗೂಸಾ ಕೊಟ್ಟರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾಶ್ಮೀರದಲ್ಲಿ ಭಯೋತ್ಪಾದಕರನ್ನು ಬೆಳಸಿ ಪ್ರೋತ್ಸಾಹಿಸುತ್ತಿದ್ದರು. ಕಾಶ್ಮೀರ ನಮ್ಮ ದೇಶದ ಅವಿಭಾಜ್ಯ ಅಂಗ. ಅಂಥ ಕಾಶ್ಮೀರದ ಲಾಲ್‌ಚೌಕ್‌ನಲ್ಲಿ ಭಾರತದ ಧ್ವಜ ಹಾರುತ್ತಿರಲಿಲ್ಲ. ಪಕ್ಕದ ದೇಶವಾದ ಪಾಕಿಸ್ತಾನದ ಧ್ವಜ ಹಾರುತ್ತಿತ್ತು. ನಾವು ಅದನ್ನು ಇಳಿಸಿ, ಭಾರತದ ತ್ರಿವರ್ಣ ಧ್ವಜವನ್ನು ಏರಿಸಿದ್ದೇವೆ. ಹುಬ್ಬಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ಮೈದಾನದಲ್ಲಿ ನಮ್ಮ ಧ್ವಜವನ್ನು ಏರಿಸಿದವರು ತಾವು. ರಾಷ್ಟ್ರಭಿಮಾನ ಶೂನ್ಯರಾಗಿ ನಾವು ಇಲ್ಲಿಗೆ ಬಂದಿಲ್ಲ. ಬಾಬಾಬುಡನ್‌ಗಿರಿ ಎಂದು ಏಕೆ ಹೇಳಬೇಕು? ದತ್ತಪೀಠವನ್ನು ದತ್ತಪೀಠ ಎಂದು ಹೇಳುತ್ತೇವೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಹೆಚ್.ಡಿ. ಬಸವರಾಜು: ಕಾಂಗ್ರೆಸ್ ಸರ್ಕಾರದಲ್ಲಿ ದೇವಸ್ಥಾನಗಳನ್ನು ಮಸೀದಿಗಳನ್ನು ಹಾಳು ಮಾಡಿದರು.

5:10 ಪಿಎಂ

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ದತ್ತ ಪೀಠದ ಬಗ್ಗೆ ಮಾತನಾಡುತ್ತಿದ್ದಾರೆ, ಚಿಕ್ಕಮಗಳೂರು ಜಿಲ್ಲೆಯಿಂದ ಮೂರು ಜನ ಆರಿಸಿ ಬಂದಿದ್ದೇವೆ. ನಮ್ಮ ಜಿಲ್ಲೆಯಿಂದ 24, 16 ಸಾವಿರ ಮತಗಳ ಅಂತರದಿಂದ ಗೆದ್ದು ಬಂದವರು ನಾವು. ಅಲ್ಲಿ ಕಾಂಗ್ರೆಸ್ಸಿನ ತಳವನ್ನು ಕಿತ್ತೆಸೆದು ಬಂದಿದ್ದೇವೆ. ಇಲ್ಲಿ ದತ್ತಪೀಠದ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಹಕ್ಕು ಇಲ್ಲ. ದತ್ತ ಪೀಠದ ಬಗ್ಗೆ ಮಾತನಾಡಿದ್ದರಿಂದ ಕಾಂಗ್ರೆಸ್ಸಿನ ಸಚಿವರವನ್ನು ಮನೆಗೆ ಕಳುಹಿಸಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಅಧ್ಯಕ್ಷರೆ, ಡಾ: ಪರಮೇಶ್ವರ್‌ರವರು ಮಾತನಾಡುವಾಗ ಎಲ್ಲವನ್ನೂ ಉಲ್ಲೇಖ ಮಾಡುತ್ತಿದ್ದಾರೆ. ಒಪ್ಪಿಕೊಳ್ಳೋಣ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ತಾವು ನಮ್ಮ ಬಗ್ಗೆ ಉಲ್ಲೇಖ ಮಾಡುತ್ತಿದ್ದೀರಲ್ಲಾ, ಒಪ್ಪಿಕೊಳ್ಳೋಣ. ಅದೇ ರೀತಿ ಕೊಡಗಿನ ಬಾಲೂರು ದೇವಸ್ಥಾನದ ಬಗ್ಗೆ ಅದನ್ನೂ ಕೂಡ ತಾವು ಉಲ್ಲೇಖ ಮಾಡಬೇಕು. ಯಾವ ಸಂದರ್ಭದಲ್ಲಿ ಆ ದೇವಸ್ಥಾನವನ್ನು ಒಡೆದು, ಅದನ್ನು ಯಾರು ಮಾಡಿದರು? ಆ ಅವಧಿ ಎಂಥದ್ದಾಗಿತ್ತು ಎನ್ನುವುದನ್ನೂ ಕೂಡ ತಾವು ಉಲ್ಲೇಖ ಮಾಡಬೇಕು. ಇವತ್ತು ಚಿಕ್ಕಮಗಳೂರಿನ ದತ್ತಪೀಠವನ್ನು ಪ್ರಸ್ತಾಪ ಮಾಡುವುದಿಲ್ಲ. ಕೊಡಗು ಜಿಲ್ಲೆಯ ಬಾಲೂರು ದೇವಸ್ಥಾನದ ಘಟನೆಯನ್ನೂ ಕೂಡ ನೀವು ಪ್ರಸ್ತಾವನೆ ಮಾಡಬೇಕು. ಅದರ ಮೂಲಕ ಈ ಸದನಕ್ಕೆ ಗೌರವ ತರಬೇಕೆಂದು ತಮಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. ಅವರು ಯಾರಿಗೂ ಯೀಲ್ಡ್ ಆಗಿಲ್ಲ.

Dr. G. Parmeshwar: I have not yielded please. ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಹೊಸ ಸರ್ಕಾರ ರಚನೆ ಆಗಿದೆ. ಕರ್ನಾಟದ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಪ್ರಪ್ರಥಮ ಬಾರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಮತ್ತು ಉಪ ಮುಖ್ಯಮಂತ್ರಿಗಳಾಗಿರತಕ್ಕಂಥ ಸನ್ಮಾನ್ಯ ಸಿದ್ಧರಾಮಯ್ಯನವರ ಸಹಕಾರದಿಂದ ರಚನೆ ಆಗಿದೆ. ಸನ್ಮಾನ್ಯ ರಾಜ್ಯಪಾಲರು ಈ ಸರ್ಕಾರದ ಮುಂದಿನ ರೂಪುರೇಷೆಗಳನ್ನು ಬಹಳ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ಆ ವಿಷಯಗಳಿಗೆ ಹೋಗುವುದಕ್ಕೆ ಮುಂಚೆ ನಮ್ಮಲ್ಲಿ ಈ ಆರ್ಥಿಕ ವ್ಯವಸ್ಥೆಯ ಬಗ್ಗೆ ಒಂದು ಪಕ್ಷಿನೋಟವನ್ನು ಹಾಯಿಸಿದರೆ ಸರಿ ಹೋಗಬಹುದೇನೋ ಎಂದು ನಾನು ಭಾವಿಸಿಕೊಂಡಿದ್ದೇನೆ. ಕರ್ನಾಟಕ ರಾಜ್ಯ ಪ್ರಾರಂಭದಿಂದಲೂ ಕೂಡ right from its inception it has maintained fairy a good rate of growth of economy ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ನಮ್ಮ ಪಾಲಿಸಿಗಳಿಗೆ, ಪ್ರೋಗ್ರಾಂಗಳಿಗೆ ಹೊಂದಿಸಿಕೊಂಡು ಆ ಆರ್ಥಿಕ ವ್ಯವಸ್ಥೆಯನ್ನು ನಮ್ಮ ರಾಜ್ಯ ಉಳಿಸಿಕೊಂಡು ಬಂದಿದೆ. 2002–03ನೇ ವರ್ಷ 10ನೇ ಪಂಚ ವಾರ್ಷಿಕ ಯೋಜನೆಯ ಮೊದಲನೆ ವರ್ಷ. ಪ್ಲಾನಿಂಗ್ ಕಮಿಷನ್‌ರವರು ನಮ್ಮ ರಾಜ್ಯಕ್ಕೆ ಒಂದು ಗೈಡ್‌ಲೈನ್ ಅನ್ನು ಕೊಟ್ಟರು. ಅದೇನೆಂದರೆ, ನೀವು 101 ಪರ್ಸೆಂಟ್ growth rate ಅನ್ನು maintain ಮಾಡಬೇಕು ಎಂದು Planning Commission ನವರು 2002–03ರಲ್ಲಿ ನಮ್ಮ ರಾಜ್ಯಕ್ಕೆ ಹೇಳುತ್ತಾರೆ. 2002–03ರಲ್ಲಿ National Average ಇಡೀ ರಾಷ್ಟ್ರದ growth rate ಇದ್ದು 6.5 ಪರ್ಸೆಂಟ್, ಆದರೆ ಕರ್ನಾಟಕ ರಾಜ್ಯದ್ದು 6.8 ಪರ್ಸೆಂಟ್ ಇತ್ತು. ನಮ್ಮ ರಾಜ್ಯದ ಬೆಳವಣಿಗೆ ಗತಿ 6.8 ಪರ್ಸೆಂಟ್ ಅಂದರೆ ರಾಷ್ಟ್ರದ ಅಭಿವೃದ್ಧಿಗಿಂತ ಹೆಚ್ಚಾಗಿತ್ತು ಎಂದರೆ ನಮ್ಮ ಆರ್ಥಿಕ ವ್ಯವಸ್ಥೆ ಬಹಳ ಚೆನ್ನಾಗಿತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರಲ್ಲಿ 2–3 parameters ಅನ್ನು ಅವರು ಇಟ್ಟುಕೊಂಡಿದ್ದಾರೆ. ಅವರು sectorial composition ಮಾಡಿಕೊಂಡು ಈ ಆರ್ಥಿಕ ವ್ಯವಸ್ಥೆಯನ್ನು ನೋಡುತ್ತಾರೆ. ದೃಷ್ಟಿಕೋನ ಯಾವ ರೀತಿಯಾಗಿ ನೋಡುತ್ತಾರೆಂದರೆ, ಮೊದಲನೆಯದು primary sector, ಆ primary sectorನಲ್ಲಿ ಏನೆಂದರೆ ಕೃಷಿ, ಅರಣ್ಯ, ಮೀನುಗಾರಿಕೆ, ಗಣಿ, ಇಂಥದೆಲ್ಲಾ ಕೂಡ ವಿಚಾರಗಳು ಬರತಕ್ಕಂಥದ್ದು. ಆದರೆ ನಮ್ಮ ದುರ್ದೈವ ಏನಾಯಿತೆಂದರೆ, ಕಳೆದು ಮೂರು ವರ್ಷ ಸತತವಾಗಿ ನಮ್ಮ ರಾಜ್ಯದಲ್ಲಿ ಬರಗಾಲ ಬಂತು. ಈ ಮೂರು ವರ್ಷದ ಬರಗಾಲದ ಬವಣೆಯಿಂದ ನಮ್ಮ ರಾಜ್ಯದ ಆಹಾರ ಧಾನ್ಯಗಳ ಉತ್ಪಾದನೆ ಏನಿತ್ತು. ಅದು 106.39 ಲಕ್ಷ ಮೆಟ್ರಿಕ್ ಟನ್ ಒಂದು ವರ್ಷಕ್ಕೆ ಆಗಬೇಕಾದದ್ದು ಕಳೆದ ವರ್ಷ ಕೇವಲ 63.68 ಲಕ್ಷ ಮೆಟ್ರಿಕ್ ಟನ್ ಆಗಿರುವಂಥದ್ದು ಅಂದರೆ 50 ಪರ್ಸೆಂಟ್ ಕಡಿಮೆ ಆಗಿದೆ. ಅರ್ಥಾತ್ ನಮ್ಮ ಆರ್ಥಿಕ ವ್ಯವಸ್ಥೆಗೆ ಅದು ಒಂದು contributory factor ಆಗಿರುತ್ತಾ ಇತ್ತೋ negative growth ಅದು ಅಯಿತು. ಅದಕ್ಕೋಸ್ಕರ ನಮ್ಮ ಅನೇಕ ಕಾರ್ಯಕ್ರಮಗಳನ್ನು, ಅನೇಕ ಪಾಲಿಸಿಗಳನ್ನು ಮಾಡುವುದಕ್ಕೆ ಕೂಡ ತೊಂದರೆಯಾಯಿತು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ primary sector ನಲ್ಲಿ ಕೃಷಿ ಮತ್ತೊಂದು ಹೇಳುವುದಾದರೆ, secondary sector ನಲ್ಲಿ small scale industries, large and medium scale industries, social sectors, ಇವೆಲ್ಲಾ

ಬರತಕ್ಕಂಥದ್ದರಲ್ಲಿ ನಾವು 6.5 ರಿಂದ 6.8 growth rate ಅನ್ನು maintain ಮಾಡಿದ್ದೇವೆ. ಮತ್ತು tertiary sector ನಲ್ಲಿ ಬರತಕ್ಕಂಥದ್ದು services, technology, ಇಂಥವೆಲ್ಲಾ ಬರತಕ್ಕಂಥದ್ದು. ಅದರಲ್ಲಿ ನಮ್ಮ ಸಾಧನೆ ಏನು ಎಂದರೆ, Planning Commission ನವರು ಏನು ನಮಗೆ 10.1 growth rate ಕೊಟ್ಟಿದ್ದರು ಅದಕ್ಕಿಂತ ಹೆಚ್ಚಾಗಿ ನಾವು ಸಾಧನೆಯನ್ನು ಈ tertiary sector ನಲ್ಲಿ ಮಾಡುವುದಕ್ಕೆ ಆಗಿದೆ. 10.3 ಪರ್ಸೆಂಟ್ ನಿಂದ 11.5 ಪರ್ಸೆಂಟ್‌ಗೆ ನಾವು ಆ growth rate ಅನ್ನು maintain ಮಾಡಿದ್ದೇವೆ. ಆದರೆ National Average teritiary sector ನಲ್ಲಿ ಬರೀ 9 ಪರ್ಸೆಂಟ್ ಇತ್ತು. ಅಂದರೆ ಕರ್ನಾಟಕದಲ್ಲಿ ಆ Tertiary sector ನಲ್ಲಿ ನಾವು ಹೆಚ್ಚು ಗಣನೀಯವಾದ ಸಾಧನೆಯನ್ನು ಮಾಡಿದೆವು. Information Technology ಇದಕ್ಕೆ ಪ್ರಾಮುಖ್ಯವಾದ ಕಾರಣ. ಕರ್ನಾಟಕ ರಾಜ್ಯ ಇಡೀ ದೇಶದ 60 ಭಾಗ software ಅನ್ನು produce ಮಾಡುವಂಥದ್ದು. 60% of the national software development is done in Bangalore, Karnataka. ಅದರಲ್ಲಿ ನಾವು ವರ್ಷ ವರ್ಷಕ್ಕೆ ಹೆಚ್ಚು ಮಾಡುತ್ತಲೇ ಹೋಗಿದ್ದೇವೆ. 1999 ರಿಂದ ನಾವು ಏನು information technology ಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದೆವೋ ಅದಕ್ಕೆ ಅನೇಕ ಕಾರಣಗಳೂ ಕೂಡ ಇವೆ. 2003–04ಕ್ಕೆ ಕರ್ನಾಟಕ ರಾಜ್ಯದಿಂದ ಸುಮಾರು 18 ಸಾವಿರ ಕೋಟಿ ರೂಪಾಯಿಗಳನ್ನು export ಅನ್ನು ಮಾಡತಕ್ಕಂಥದ್ದು ಇತಿಹಾಸದಲ್ಲಿ ಆಗಲಿಲ್ಲ. ಅಂದರೆ ನಮ್ಮ ರಾಜ್ಯದ export ನಲ್ಲಿ 33 ಪರ್ಸೆಂಟ್ ಬರೀ ನಲ್ಲಿ ಆಗಿರತಕ್ಕಂಥದ್ದು. ಇದರ fall out ಏನು? ಬಹುಶಃ ಏನಪ್ಪ ಇವರೆಲ್ಲಾ ಐಟಿ ಐಟಿ ಎಂದು ಮಾತನಾಡುತ್ತಾರೆ ಎಂದು ಹೇಳುತ್ತಾರೆ, ಆದರೆ ಇದರ ಏನೆಂದು ಹೇಳಿದರೆ, 1 ಲಕ್ಷದ 50 ಸಾವಿರ ಜನ ಈ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ. 1,50,000 software engineers are working in various nationa and multi-national companies. ಯಾರು ಅವರು ಅಂದರೆ ನಮ್ಮ ಬೆಂಗಳೂರಿನವರು, ನಮ್ಮ ಕಾಲೇಜುಗಳನ್ನು ಓದಿದಂಥವರು, ಈ ಕರ್ನಾಟಕ ರಾಜ್ಯದ ಮಕ್ಕಳು, ಪದವೀಧರರು, ಅಲ್ಲಿ software engineers ಆಗಿ ಕೆಲಸ ಮಾಡತಕ್ಕಂಥವರು. ಅದೇ ಅಮೇರಿಕಾದ ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯಲ್ಲಿ ಕೂಡ ಅಷ್ಟು ಜನ ಇಲ್ಲ. ಅಲ್ಲಿ ಇರತಕ್ಕಂಥದ್ದು 1 ಲಕ್ಷದ 35 ಸಾವಿರ ಜನ ಎಂದು ಅಂಕಿಅಂಶದಲ್ಲಿ ಸಿಕ್ಕಿದೆ. ಇವತ್ತು ಹೊಸ ಸಮ್ಮಿಶ್ರ ಸರ್ಕಾರದಲ್ಲಿ ಈಗಾಗಲೇ ನಮ್ಮ ಭಾಷಣದಲ್ಲಿ ಸನ್ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಅದೇನೆಂದರೆ,

"ನನ್ನ ಸರ್ಕಾರವು 2ನೇ ದರ್ಜೆಯ ನಗರಗಳಲ್ಲಿ ಕೂಡ ವಿದ್ಯಾವಂತ ಯುವಕರಿಗೆ ಹೆಚ್ಚು ಪ್ರಮಾಣದ ಉದ್ಯೋಗಾವಕಾಶಗಳನ್ನು ಒದಗಿಸುವುದಕ್ಕೆ ಒತ್ತು ನೀಡಲು ಉದ್ದೇಶಿಸಿದೆ. ಮಾಹಿತಿ ತಂತ್ರಜ್ಞಾನದ ವಲಯದಲ್ಲಿ ಒಂದು ದಶಲಕ್ಷಕ್ಕಿಂತ ಹೆಚ್ಚಿನ ಉದ್ಯೋಗಗಳನ್ನು ಒದಗಿಸುವುದಕ್ಕೆ ಅಂದಾಜು ಮಾಡಿದೆ".

ಅಂದರೆ ಹಿಂದೆ ಏನು ಕಾಂಗ್ರೆಸ್ ಪಕ್ಷದ ಸರ್ಕಾರ ಮಾಡಿಕೊಂಡು ಬಂದಿತ್ತು. ಪ್ರಗತಿಯನ್ನು ಸಾಧನೆ ಮಾಡಿತ್ತು. ಅದನ್ನು ಮುಂದುವರಿಸಿಕೊಂಡು ಹೋಗತಕ್ಕಂಥದ್ದನ್ನೂ ಕೂಡ ಇವತ್ತು ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ತಿಳಿಸಿದ್ದಾರೆ. ಈ ಕಷ್ಟದ ದಿನಗಳಲ್ಲಿ national average growth rate ಕಡಿಮೆ ಆಯಿತು, primary sector ನಲ್ಲಿ ಕೃಷಿ ಕ್ಷೇತ್ರದಲ್ಲಿ ನಮಗೆ

negative growth ಆಯಿತು ಎಂದು ನಾನು ಆಗಲೇ ಹೇಳಿದೆ. ಇದನ್ನು ಎಲ್ಲೋ ಒಂದು ಕಡೆ ನಾವು adjust ಮಾಡಬೇಕಾಗುತ್ತದೆ. ಆರ್ಥಿಕ ವ್ಯವಸ್ಥೆಯಲ್ಲಿ ನಮ್ಮ ಈ ಆರ್ಥಿಕ ವ್ಯವಸ್ಥೆಯನ್ನು maintatin ಮಾಡಬೇಕಾದರೆ ಎಲ್ಲೋ ಒಂದು ಕಡೆ ನಾವು adjust ಮಾಡಬೇಕಾಗುತ್ತದೆ. ಅದಕ್ಕಾಗಿ ಸರ್ಕಾರ ಅನೇಕ ಸುಧಾರಣೆಗಳನ್ನು ತರುವುದಕ್ಕೆ ಪ್ರಯತ್ನ ಮಾಡಿತು. ಏನಪ್ಪಾ ಸುಧಾರಣೆ ಎಂದರೆ Medium Term Fiscal Plan (M.T.F.P.) ಇದನ್ನು ನಾವು 2001 ರಿಂದ 2004 ಮತ್ತು 2005ರವರೆಗೆ ಈ ವ್ಯವಸ್ಥೆ ಮುಂದುವರೆಯಬೇಕು ಎನ್ನತಕ್ಕದ್ದು ನಮ್ಮ ಉದ್ದೇಶ. ಇದರ ಉದ್ದೇಶವೇನು? ಇದರ ಉದ್ದೇಶ ರೆವಿನ್ಯೂ ಕಲೆಕ್ಷನ್ಸ್ ಬರುತ್ತದೆ. ಇದನ್ನೆಲ್ಲವನ್ನು ನಾವು ಸಮಗ್ರವಾಗಿ ಬಹಳ ವ್ಯವಸ್ಥಿತವಾಗಿ ರೆವಿನ್ಯೂ ಕಲೆಕ್ಷನ್ ರಾಜ್ಯದಲ್ಲಿ ಆಗಬೇಕಾಗುತ್ತದೆ. ಇದನ್ನು quarterly review ಅಥವಾ half yearly review ಇದನ್ನು ಮೀಡಿಯಂ term fiscal ಪ್ಲಾನ್‌ನಲ್ಲಿ ನಾವು ಮಾಡದಿದ್ದರೆ ನಮಗೆಷ್ಟು ಸಂದಾಯವಾಗಿದೆ? ಎಷ್ಟು ಖರ್ಚಾಗಿದೆ? ಇದನ್ನು ನಾವು ಆಗಾಗ್ಗೆ ನೋಡದಿದ್ದರೆ ಬಹುಶ: ನಮ್ಮ ಆರ್ಥಿಕ ವ್ಯವಸ್ಥೆ. ಈ ಕಷ್ಟದ ದಿನಗಳಲ್ಲಿ ಸರಿಹೋಗುವುದಿಲ್ಲವೆಂದು ಈ ಮೀಡಿಯಂ ಟರ್ಮ್ ಫಿಸಿಕಲ್ ಪ್ಲಾನಿನ ವ್ಯವಸ್ಥೆಯನ್ನು ತಂದೆವು. ಜೊತೆಗೆ non-productive expenditure ಬರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೇ, ಅವರು ಅಂಕಿಅಂಶವನ್ನು ಕೊಟ್ಟರು. 60 ಪರ್‌ಸೆಂಟ್, ಐ.ಟಿ, ಇನ್ ಫಾರ್ಮೇಷನ್ ಟೆಕ್ನಾಲಜಿಯಿಂದಾಗಿ ಕರ್ನಾಟಕದಿಂದ 33 ಪರ್‌ಸೆಂಟ್ ಎಕ್ಸಪೋರ್ಟ್ ಮಾಡಿದ್ದ ಬಗ್ಗೆ ಎಲ್ಲಾ ಹೇಳಿದರು. ಒಂದೂವರೆ ಲಕ್ಷ ಸಾಫ್ಟ್‌ವೇರ್ ಇಂಜಿನಿರ್ಸ್‌ಗೆ ಉದ್ಯೋಗದ ಅವಕಾಶ ಸಿಕ್ಕಿದೆಯೆಂದು ಹೇಳಿದರು. ಇದರಲ್ಲಿ ಕರ್ನಾಟಕದವರಿಗೆ ಎಷ್ಟು ಸಿಕ್ಕಿದೆ ಮತ್ತು ಕಂಪ್ಯೂಟರೈಜೇಷನ್ ಆದ ಮೇಲೆ, ಆಗ ತಾವು ಮತ್ತು ಶ್ರೀ ರಮೇಶ್‌ಕುಮಾರ್‌ರವರು, ಶ್ರೀ ಈಶ್ವರಪ್ಪನವರ ಹತ್ತಿರ ಚರ್ಚೆ ಮಾಡಿದಿರಿ. ಆ ವರ್ಗದವರಿಗೆ, ಎಷ್ಟು ಅನ್‌ಸ್ಕಿಲ್ಡ್ ಲೇಬರ್‌ಗೆ, ದಲಿತರಿಗೆ ಎಷ್ಟು unemployment ಆಗಿದೆ? ಈಗ employment ತಪ್ಪಿ ಹೋಯಿತು. ಕಂಪ್ಯೂಟರೈಜೇಷನ್‌ನಿಂದ unemployment ಸಮಸ್ಯೆ ಜಾಸ್ತಿಯಾಯಿತು. ಆದ್ದರಿಂದ ಈ ವರ್ಗಕ್ಕೆ ಎಷ್ಟು employment provide ಮಾಡಿದ್ದೀರಿ? ಹಿಂದೆ ಮಾನ್ಯ ಸಿಂಧ್ಯರವರು ಇಲ್ಲಿ ಕುಳಿತಿದ್ದಾಗ ಮಾನ್ಯ ದೇಶ್‌ಪಾಂಡೆಯವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದರು. ನೀವು ಕೈಗಾರಿಕಾ ಸಚಿವರಾಗಿ ಹತ್ತು ವರ್ಷಗಳ ಕಾಲ ಇದ್ದಿರಿ, ಎಷ್ಟು ಕೈಗಾರಿಕೆಗಳು ಮುಚ್ಚಿವೆ? ಎಷ್ಟು ಜನರಿಗೆ ನಿರುದ್ಯೋಗವಾಗಿದೆಯೆಂದು ಇದೇ ಪ್ರಶ್ನೆಯನ್ನು ಕೇಳಿದ್ದರು. ಅದನ್ನು ಮನಃ ನಾನು ನೆನಪು ಮಾಡಿಕೊಂಡೆ. ಅದಕ್ಕೆ ಉತ್ತರವನ್ನು ಹೇಳಬೇಕು. ಐಟಿ ಪ್ರಾಯಶಃ ಏನೂ, ಒಂದು ಅಟ್ಮಾಸ್‌ಫಿಯರ್ ಬಂದಿದೆ. ಇಲ್ಲಿ ಆದರೆ ಸರ್ಕಾರದಿಂದ ಅವರಿಗೆ ಏನೂ ಆಗಬೇಕಾಗಿಲ್ಲ. ಅವರು ಡೆವಲಪ್ ಆಗುತ್ತಾ ಹೋಗುತ್ತಿದ್ದಾರೆ because of the atmosphere in Karnataka ಅವರು ಬಂದು settle ಆಗುತ್ತಿದ್ದಾರೆ ಎಂಬುದನ್ನು ಬಿಟ್ಟರೆ ಅದಕ್ಕೆ ಇನ್‌ಫ್ರಾಸ್ಟಕ್ಚರ್‌ನ್ನು ಡೆವಲಪ್ ಮಾಡಿಕೊಡುವುದು ಬೇಕಾಗಿಲ್ಲವೆಂದು ಕಾಣುತ್ತದೆ. ಇದಕ್ಕೆ ತಾವು ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಾಫ್ಟ್‌ವೇರ್ ಇಂಜನಿಯರ್‌ಗೆ ಜಾಸ್ತಿ ಮಾಡಿದ್ದೇವೆಂದು ತಾವು ಅಂಕಿಅಂಶವನ್ನು ಕೊಟ್ಟಿದ್ದೀರಿ ಆದರೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಸಾಫ್ಟ್‌ವೇರ್

ಇಂಜಿನಿಯರಿಂಗ್ ಮಾಡಿರುವ ಪರ್‌ಸೆಂಟೇಜ್ ಎಷ್ಟು? ಸಾಫ್ಟ್‌ವೇರ್ ಇಂಜಿನಿಯರಿಂಗ್ ಅಲ್ಲದೇ ಇರುವವರ ಪರ್‌ಸೆಂಟೇಜ್ ಎಷ್ಟು? ಅವರಿಗೆ ನೀವು ಎಷ್ಟು employment opportunity ಯನ್ನು ಕ್ರಿಯೇಟ್ ಮಾಡಿದ್ದೀರಿ? ಎರಡನೆಯದಾಗಿ, illeterate unemployees in the rural side ನಲ್ಲಿ ಅವರಿಗೆ ನೀವು ಎಷ್ಟು ಪರ್‌ಸೆಂಟ್ employment ಅನ್ನು generate ಮಾಡಿಕೊಟ್ಟಿದ್ದೀರಿ? ಐಟಿ ಇಂಜಿನಿಯರ್ಸ್ ಕರ್ನಾಟಕ ರಾಜ್ಯದಲ್ಲಿ information technology engineering courseನ್ನು ಪಡೆದಂಥ ವಿದ್ಯಾರ್ಥಿ at whose cost they became IT engineers and whose interest they are serving Are you award of it? Whose interest they are serving? They are serving the interests of Multinational Corporations and the interests of the imperialistic countries which are looting the Third World countries. And you are creating infrastructure in Karnataka to loot our own natural resources by the Multinational Corporations and you are very intelligent silent on it..

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಹೆಗ್ಡೆ ಮತ್ತು ಮಾನ್ಯ ರೆಡ್ಡಿಯವರು ಕೇಳಿದರು. ಕಂಪ್ಯೂಟರೈಜೇಷನ್ ಅಥವಾ ಇನ್‌ಫರ್ಮೇಷನ್ ಟೆಕ್ನಾಲಜಿಯಲ್ಲಿ ನಾವು ಬಹಳ ಅರ್ಥ ಮಾಡಿಕೊಳ್ಳಬೇಕಾಗಿರತಕ್ಕದ್ದು. ಈ value addition chainನಲ್ಲಿ ಮೂರು ಲೆವೆಲ್ ಇದೆ. ಮೊದಲನೆಯದ್ದು ನಾನೇನು ಈಗ ಸಾಫ್ಟ್‌ವೇರ್ ಇಂಜಿನಿಯರ್ಸ್ ಬಗ್ಗೆ ರೆಫರ್ ಮಾಡಿದೆನಲ್ಲಾ ಅವೆಲ್ಲಾ ಬಿ.ಇ. ಗ್ರಾಜ್ಯುಯೇಟ್ಸ್, ಅಥವಾ M.E., ಪಿಹೆಚ್‌ಡಿ ಮಾಡಿರುವವರು, high end ನಲ್ಲಿ ಇರತಕ್ಕವರು. ಅವರು ಒಂದು ಲಕ್ಷದ ಐವತ್ತು ಸಾವಿರ ಜನ. ಆದರೆ ಸೆಕೆಂಡ್ ಲೆವೆಲ್‌ನಲ್ಲಿ ಪಾಲಿಟೆಕ್ನಿಕ್‌ನವರು, ಡಿಪ್ಲೊಮೊದಲ್ಲಿ ಬೇರೆ ಬೇರೆ ಕೋರ್ಸ್‌ಗಳನ್ನು ಮಾಡಿರುವವರು, ಬಿ.ಎಸ್.ಸಿ. ನಲ್ಲಿ ಟ್ರೇನಿಂಗ್ ತೆಗೆದುಕೊಂಡಿರುವವರು, BCA degree ತೆಗೆದುಕೊಂಡವರು ಮತ್ತು ಪ್ರೋಗ್ರಾಮರ್ಸ್, ಬಿಎಸ್‌ಸಿ ಮಾಡಿ ಬೇರೆ ಬೇರೆ ಸ್ಟ್ಯಾಟಿಸ್ಟಿಕ್‌ನಲ್ಲಿ, ಮ್ಯಾಥಮ್ಯಾಟಿಕ್ಸ್‌ನಲ್ಲಿ ಮಾಡಿರುತ್ತಾರೆ, ಅವರನ್ನು ಪ್ರೋಗ್ರಾಮರ್ಸ್ ಎನ್ನುತ್ತಾರೆ. They are in the second level of the value addition chain ಸೆಕೆಂಡ್ ಲೆವೆಲ್‌ನಲ್ಲೂ ಗ್ರಾಮಾಂತರ ಪ್ರದೇಶದಿಂದಲೇ ಹೆಚ್ಚು ಜನರು ಬರುತ್ತಾರೆ, ನಲ್ಲಿ ಬರತಕ್ಕವರು ಐ.ಟಿ.ಐ. ನವರು, ಡೇಟಾ ಎಂಟ್ರಿಯಲ್ಲಿ ಮಾಡತಕ್ಕವರು, ಬೇರೆ ಬೇರೆ ಸಾಫ್ಟ್‌ವೇರ್ ಡೆವಲಪ್‌ಮೆಂಟ್‌ನಲ್ಲಿ ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕವರು, ಈ ವ್ಯಾಲ್ಯೂ ಅಡಿಷನ್ ಚೈನ್‌ನಲ್ಲಿ ಈ ರೀತಿ ಡಿವೈಡ್ ಆಗಿದೆ. ಆದ್ದರಿಂದ ಎಲ್ಲವೂ ಕೂಡ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಹೋಗತಕ್ಕದ್ದು ಅಥವಾ ಎಲ್ಲಾ ಅವರಿಗೆ ಮಾತ್ರ ಅನುಕೂಲವಾಗತಕ್ಕದ್ದಲ್ಲ. ಆದರೆ ಇನ್ನೊಂದು ಅಂಶವನ್ನು ನಾನು ಹೇಳಿದ ಮೇಲೆ ತಮಗೆ ಮಾಹಿತಿಯಾಗಬಹುದು ಎನ್ನತಕ್ಕ ಮಾತು.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಒಂದೇ ಒಂದು ನಿಮಿಷ ಐ.ಟಿ. ಇಂಡಸ್ಟ್ರಿಯಲ್ಲಿ ಇಷ್ಟೊಂದು ಅಧಿಕ ಪ್ರಮಾಣದಲ್ಲಿ ಬೆಳವಣಿಗೆಯಾಗಿದೆಯೆಂದು ಹೇಳುತ್ತಿರಬೇಕಾದರೆ ಸರ್ಕಾರ ಕೊಟ್ಟಿರುವ ಸೌಲಭ್ಯಗಳಿಂದ ಈ

ಇನ್‌ಫಾರ್ಮೇಷನ್ ಟೆಕ್ನಾಲಜಿಯಲ್ಲಿ ಇಷ್ಟೊಂದು ಬೆಳವಣಿಗೆಯಾಗಿ ಸುಮಾರು ಹದಿನೆಂಟು ಸಾವಿರ ಕೋಟಿ ರೂಪಾಯಿಗಳಷ್ಟು ಎಕ್ಸಪೋರ್ಟ್ ಮಾಡುವಷ್ಟು ಪರಿಸ್ಥಿತಿ ಬಂದಿದೆಯೆಂಬ ಮಾತನ್ನು ಇಲ್ಲಿ ಹೇಳುತ್ತಿದ್ದರೆ. ಇದರಲ್ಲಿ ಸರ್ಕಾರದ ಪಾತ್ರವೇನು ಎಂಬ ಪ್ರಶ್ನೆ ಬರುತ್ತದೆ. ಒಂದು ವೇಳೆ ಮಾನ್ಯ ಅಜೀಮ್ ಪ್ರೇಂಜಿಯವರು ಮತ್ತು ಮಾನ್ಯ ನಾರಾಯಣಮೂರ್ತಿಯವರಿಬ್ಬರು ಇಲ್ಲಿ ಬಾರದಿದ್ದರೆ ಸರ್ಕಾರದಿಂದ ಏನು ಸಾಧ್ಯವಾಗುತ್ತಿತ್ತು? ಇದು ಅವರ ವೈಯಕ್ತಿಕ ಸಾಧನೆಯೇ ಹೊರತು ಸರ್ಕಾರದ ಸಾಧನೆಯೇನು ಎಂಬ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆ ಇದೆಯೆಂದು ನಾನು ಭಾವಿಸುತ್ತೇನೆ. 18 ಸಾವಿರ ಕೋಟಿ ರೂಪಾಯಿ ಆದಾಯ ಬರುತ್ತದೆ ಎಂದು ಹೇಳಿದರೂ ಕೂಡ, ಇವತ್ತು ಇಷ್ಟೆಲ್ಲಾ ಆದಾಯ ಬರುತ್ತಿದ್ದರೂ ಆಗುತ್ತಿರುವುದೇನೆಂದರೆ ಪ್ರವಾಸಿ ಮಂದಿರದೊಳಗಿನ ದೂರವಾಣಿ ಸಂಪರ್ಕ ಇಲ್ಲ, ಎಲ್ಲಾ ದೂರವಾಣಿಗಳ ಸಂಪರ್ಕ ಕಡಿತವಾಗಿದೆ. ಹಾಗಿದ್ದರೆ ಆ ಆದಾಯ ಎಲ್ಲಿ ಹೋಯಿತು ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತಿದೆ. ಇದು ಅವರಿಬ್ಬರ ಸಾಧನೆಯೇ ಹೊರತು ಸರ್ಕಾರದ ಸಾಧನೆಯಲ್ಲ.

ಶ್ರೀ ಬಸವರಾಜ್ ರಾಯರೆಡ್ಡಿ: ವಿಪ್ರೋ ಮತ್ತು ಇನ್‌ಫೋಸಿಸ್‌ನವರಿಂದ ಏನು ಆದಾಯ ಬಂದಿದೆ ಅದು ಕರ್ನಾಟಕ ಮತ್ತು ಭಾರತ ದೇಶದಲ್ಲಿರುವ ಹಲವಾರು ಶೇರುದಾರರಿಗೆ ಬಂದಿದೆ.

ಶ್ರೀ ಸಿ.ಎಂ. ಉದಾಸಿ: ಸರ್ಕಾರಕ್ಕೆ ಏನು ಬಂದಿಲ್ಲವಲ್ಲಾ?

ಶ್ರೀ ಬಸವರಾಜ್ ರಾಯರೆಡ್ಡಿ: ಇಲ್ಲಿ ಸರಕಾರಕ್ಕೆ ಬರುವ ಪ್ರಶ್ನೆ ಇಲ್ಲ, ಸರ್ಕಾರಕ್ಕೆ ಏಕೆ ಬರುತ್ತದೆ? ಜನರಿಗೆ ಬಂದಿದೆ. ಜನರಿಗೆ ಬಂದಿದೆ ಎಂದರೆ ದೇಶಕ್ಕೆ ಬಂದಂತೆ ಅಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ನಾರಾಯಣಮೂರ್ತಿ ಮತ್ತು ಮಾನ್ಯ ಪ್ರೇಂಜಿಯವರ ಟನ್ನೋವರ್‌ನಲ್ಲಿ ಬಂದಿರತಕ್ಕ ಲಾಭದಲ್ಲಿ ಶೇರುದಾರರಿಗೆ ಸಿಕ್ಕಿದೆ. ಸಾಮಾನ್ಯ ಮನುಷ್ಯರಿಗೆ ಏನೂ ಸಿಕ್ಕಿಲ್ಲ. They are deprived of primary education, health and everything and you have made everything private. What they got?

ಶ್ರೀ ಬಸವರಾಜ್ ರಾಯರೆಡ್ಡಿ: ಎಂಪ್ಲಾಯ್‌ಮೆಂಟ್ ಸಿಕ್ಕಿಲ್ಲವೇ? ಅದರಿಂದ ಉದ್ಯೋಗ ಸೃಷ್ಟಿಯಾಗಿದೆ. ಇದರಿಂದ ಬೇರೆ ಬೇರೆ ವ್ಯವಹಾರಗಳಾಗಿದೆ. ಇನ್‌ಡೈರೆಕ್ಟ್ ಆಗಿ ಬೇರೆ ಬೇರೆ ಬೆನಿಫಿಟ್ಸ್ ಸಿಕ್ಕಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇನ್‌ಡೈರೆಕ್ಟಾಗಿ ಅವರಿಗೆ ಏನು ಬೆನಿಫಿಟ್ ಸಿಕ್ಕಿದೆಯೆಂದರೆ ಹಿಂದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ without money ಚೀಟಿ ಕೊಡುತ್ತಿದ್ದರು, ಆದರೆ ಇವತ್ತು ಹತ್ತು ರೂಪಾಯಿ ತೆಗೆದುಕೊಂಡು ಚೀಟಿ ಕೊಡುತ್ತಿದ್ದಾರೆ. That is how you are indirectly helping the common man.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ರೆಡ್ಡಿಯವರು ಒಂದು ರೆಲವೆಂಟ್ ಪ್ರಶ್ನೆಯನ್ನು ರೈಸ್ ಮಾಡಿದರು. I am also inquisitive to know from you. ಮಲ್ಟಿನ್ಯಾಷನಲ್ಸ್‌ಗೆ ನಮ್ಮಲ್ಲಿ ಎಂಟ್ರಿ ಸಿಗುವುದಕ್ಕೆ ಮೊದಲು ನಮ್ಮಲ್ಲಿ ಮೆರಿಟೋರಿಯಸ್ ಸ್ಟೂಡೆಂಟ್ಸ್ ಅಲ್ಲಿಗೆ ಕೆಲಸಕ್ಕೆ ಹೋದರೆ they were earning higher wages in terms of dollars. After they got entry in our country, bilateral agreement ಆದ ಮೇಲೆ ನಮ್ಮಲ್ಲಿದ್ದಂಥ ಬಹಳ

ಹೈಲೀ ಮೆರಿಟೆಡ್ ಸ್ಟೂಡೆಂಟ್ಸ್‌ನ್ನು for a meagre sum ನಮಗೆ ನಲವತ್ತು. ಎಪ್ಪತ್ತು ಸಾವಿರ ಎಂದರೆ ಆಸೆ ಪಟ್ಟು ಬಿಡುತ್ತೇವೆ, ತೀರ ಬಡತನದಲ್ಲಿದ್ದವರು. But in terms of dollars, what he was earning was much higher. ಅವರು ನಮಗೇನೂ ಉಪಕಾರ ಮಾಡಲಿಲ್ಲ. ಇಲ್ಲಿ Friday they can conveniently say you are not required from Monday ಎಂದು ಹೇಳುತ್ತಾರೆ. ನಮ್ಮನ್ನು ಜಾಬ್ ವರ್ಕ್‌ಗೆ ಮಾಡುತ್ತಾರೆಯೇ ಹೊರತು ನಮ್ಮ ಸ್ಕಿಲ್ಲನ್ನು at a lower rate of payment ಗೆ employ ಮಾಡಿಕೊಂಡಿದ್ದಾರೆಯೇ ಹೊರತು I don't think MNCs have done any service to our country. On the contrary, we have suffered.

Sri G.V. Sriram Reddy: Not only that, at the cost of common man we produce IT engineers here and we are sending them to serve the interests of Multinational Corporations, whether to Germany or USA or UK and they are very low paid there and they are serving the interest of multinational corporations and one fine morning they will be thrown out from that country by taking away their visas. That is how they are contributing.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಸಾಫ್ಟ್‌ವೇರ್ ಇಂಜಿನಿಯರ್ಸ್‌ಗಳಿಗೆ ಎಷ್ಟು ಸಂಬಳ ಸಿಗುತ್ತಿತ್ತು, ಒಂದು ಲಕ್ಷ ರೂಪಾಯಿಗಳು, ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು ಅವರು ಇಲ್ಲಿಗೆ ಬರಲಿಕ್ಕೆ ಶುರುವಾದ ಮೇಲೆ 10 ಸಾವಿರ ರೂಪಾಯಿಗಳಿಗೆ ಆ ಸಂಬಳ ಬಂತು.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೇ, ಈ ಸಂಬಳ ಕೊಡತಕ್ಕಂಥದ್ದು, ಇನ್ನು ಬೇರೆ ಬೇರೆ ವ್ಯವಸ್ಥೆಗಳು ಏನು ಇವೆ, ಇದೆಲ್ಲಾ ಆಗುವಂಥದ್ದು. It is not Mr. Jayaprakash Hegde or Mr. Srirama Reddy or me.

Sri K. Jayaprakash Hegde: At wat cost? ನಮಗೇನು ಬೆನೆಫಿಟ್ ಆಯಿತು. ಅದಕ್ಕಿಂತಲೂ ಜಾಸ್ತಿ ಅವರಿಗೆ ಬೆನಿಫಿಟ್ ಆಯಿತು.

Sri G.V. Srirama Reddy: You are arguing a very bad case. It is the demand of the Multi National Corporation. It is not the demand or the common man of this country.

Sri K.R. Ramesh Kumar: This is precisely our allegation. the imperialist forces and the international capitalist forces have stretched their hand to exploit us. They have exploited our situation, our economic background and they have taken us for a ride. That is our grouse. They have not done any service to us. In contrast they have subjected

us to all kinds of humiliation in this world. This is the benefit we have got.

ಡಾ: ಜಿ. ಪರಮೇಶ್ವರ: ಮಾನ್ಯ ಅಧ್ಯಕ್ಷರೆ, ತಮ್ಮ ಮಾತನ್ನು ನಾನು ಸ್ವಲ್ಪ ಮಟ್ಟಿಗಾದರೂ ಒಪ್ಪುತ್ತೇನೆ ಏಕೆಂದರೆ ಪೂರ್ತಿ ಒಪ್ಪುವುದಕ್ಕಾಗುವುದಿಲ್ಲ. ಇವತ್ತು ಇನ್‌ಫರ್ಮೇಶನ್ ಟೆಕ್ನಾಲಜಿ ರೆವ್‌ಲ್ಯೂಷನ್ ಕರ್ನಾಟಕದಲ್ಲಿ ಆಗದಿದ್ದರೆ, ಬೆಂಗಳೂರಿನಲ್ಲಿ ಆಗದಿದ್ದರೆ ಬೆಂಗಳೂರಿನ ಬ್ರಾಂಡ್‌ನೇಮ್ ಬರುತ್ತಿರಲಿಲ್ಲ. ಬೆಂಗಳೂರಿನ ಬ್ರಾಂಡ್‌ನೇಮ್ ನೀವು ನ್ಯೂಯಾರ್ಕ್‌ನಲ್ಲಿ ಹೋಗಿ ಕೇಳಿದರೆ ಕರ್ನಾಟಕವಲ್ಲ ಕೇಳುವುದು ಬೆಂಗಳೂರು. ಡೆಲ್ಲಿ ಅಲ್ಲಾ ಕೇಳುವುದು ಬೆಂಗಳೂರು, ಇದರ ಅಡ್ವಾಂಟೇಜ್ ಹೇಳುತ್ತೇನೆಂದರೆ..... Let me complete.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಮ್ಮ ಸಾಮಾನ್ಯ ಜನಕ್ಕೆ ಏನೂ ಇಲ್ಲ, ಅಮೇರಿಕಾ, ರಷ್ಯಾ ದೇಶದಲ್ಲಿ ಬಂದರೆ ಏನು, ಇಲ್ಲಿಯ ಸ್ಥಳೀಯ ಜನರಿಗೆ ಏನು ಸಿಕ್ಕಿದೆ, ನಾವು ಏನು ಮಾಡಿದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಬಡಜನತೆಗೆ ಏನು ಸಿಕ್ಕಿದೆ ಎನ್ನುವಂಥದ್ದರ ಬಗ್ಗೆ ನೀವು ಹೇಳಿ. ಇನ್‌ಫರ್ಮೇಶನ್ ಟೆಕ್ನಾಲಜಿಯಿಂದ ಬೆನೆಫಿಟ್ ಆಗಿರತಕ್ಕಂಥದ್ದು ಮಲ್ಟಿನ್ಯಾಷನಲ್ ಕಾರ್ಪೋರೇಶನ್‌ಗೆ ಹೊರತು ಸಾಮಾನ್ಯ ಮನುಷ್ಯನಿಗೆ ಅಲ್ಲ. ಕರ್ನಾಟಕ ರಾಜ್ಯಕ್ಕೆ ಆದರಿಂದ ಬೆನೆಫಿಟ್ ಆಗಿಲ್ಲ. Information Technology does not give two square meals for the common man.

ಡಾ: ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, there are certain sectors where they are not directly involved with the common man. ಅದು, ಇನ್‌ಫರ್ಮೇಶನ್ ಟೆಕ್ನಾಲಜಿ ಕೂಡ ಒಂದು, ಇನ್‌ಡೈರೆಕ್ಟ್‌ಲಿ ಏನು ಆಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಇಂಜಿನಿಯರ್ಸ್‌ಗಳನ್ನು ಪ್ರೊಡ್ಯೂಸ್ ಮಾಡುವುದಕ್ಕೆ ಹೆಚ್ಚು ಕಾಲೇಜುಗಳನ್ನು ತೆಗೆಯಲಾಯಿತು. ಹೆಚ್ಚು ಗ್ರಾಜ್ಯುಯೇಟ್ಸ್‌ಗಳನ್ನು ಮಾಡಿದೆವು. ಹೆಚ್ಚು ವಿದ್ಯಾವಂತರನ್ನು ಮಾಡಿದೆವು. 1.5 ಲಕ್ಷ ಸಾಫ್ಟ್‌ವೇರ್ ಇಂಜಿನೀಯರ್ಸ್‌ನಲ್ಲಿ ಕನಿಷ್ಟ 60 ಪರ್ಸೆಂಟ್ ಕನ್ನಡದವರು ಇದ್ದಾರೆ. for your information. ಅವರು 10 ಸಾವಿರ ಸಂಬಳದಿಂದ ಹಿಡಿದು 2 ಲಕ್ಷ ರೂಪಾಯಿಗಳವರೆಗೆ ಸಂಬಳವನ್ನು ತೆಗೆದುಕೊಳ್ಳುತ್ತಿದ್ದಾರೆ. ಒಬ್ಬ ಕನ್ನಡದವರು ಎಕ್ಸಿಕ್ಯೂಟಿವ್ 5 ಲಕ್ಷ ರೂಪಾಯಿಗಳವರೆಗೆ ಸಂಬಳವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅಂತಹವರ ಸಂಖ್ಯೆ ಎಷ್ಟು ಇದೆ ಎಂದು ಹೇಳಿ.

ಡಾ: ಜಿ. ಪರಮೇಶ್ವರ: ಸಂಖ್ಯೆ you cannot relate it to a population. How can you relate it to the big population of this country? ಹೇಗೆ ಮಾಡುವುದಕ್ಕಾಗುತ್ತದೆ ಹೇಳಿ?

Sri G.V. Srirama Reddy: We must all understand that out of common man's blood and sweat, they have become rich.

ಡಾ: ಜಿ. ಪರಮೇಶ್ವರ: ನಾವು ಅವರಿಗೆ 10 ರೂಪಾಯಿಯನ್ನೂ ಕೂಡ ಕೊಟ್ಟಿಲ್ಲ. We have not paid even one rupee to them as government.

(ಗೊಂದಲ)

Sri G.V. Sriramareddy: You cannot take that easily. Every engineer, every doctor or every scientist in this country they became engineers or doctors scientists out of the blood and sweat of the common man.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಪುನಃ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5.32 ನಿಮಿಷಕ್ಕೆ ಮುಂದಡಲ್ಪಟ್ಟು ಪುನಃ ದಿನಾಂಕ 15ನೇ ಜೂನ್ 2004ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)